ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪುಟಗಳು : 36


ರೂ. 28/–

ಕನ್ನಡ–ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ–05 • ಸಂಚಿಕೆ–10 • ಮಾರ್ಚ್ 2024





ರೂ. 28/– BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–05 • ಸಂಚಿಕೆ–10 • ಮಾರ್ಚ್ 2024

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations,** Bangalore

ಪತ್ರಗಳು

ಮಾನ್ಯರೆ,

ಇತ್ತೀಚಿಗೆ ಸಾಮಾಜಿಕ ಜಾಲ ತಾಣದಲ್ಲಿ ಕೆಲವರು ಮಹಾತ್ಮ ಗಾಂಧೀಜಿಯವರ ಬಗ್ಗೆ ಹಾಕಿರುವ ಕೀಳು ಅಭಿರುಚಿಯ ಈ ಪೋಸ್ಟ್ ನೋಡಿದೆ. ಭಗತ್ ಸಿಂಗ್, ರಾಜಗುರು ಮತ್ತು ಸುಖ್ ದೇವ್ ಅವರನ್ನು ತನ್ನ ದೇಶದಲ್ಲೇ ನೇಣಿನಿಂದ ತಪ್ಪಿಸಲು ರಾಷ್ಟ್ರಪಿತರಿಗೆ ಆಗಲಿಲ್ಲ. ಆದರೆ ದೇಶದ ಚೌಕಿದಾರ್ ಹೊರ ದೇಶದಲ್ಲಿ ಎಂಟು ಭಾರತೀಯರನ್ನು ನೇಣಿನಿಂದ ಕಾಪಾಡಿದರು ಎಂದು ಇತ್ತೀಚಿಗೆ ಕತಾರ್ ದೇಶದಲ್ಲಿ ನೇಣು ಶಿಕ್ಷೆಗೆ ಒಳಗಾಗಿದ್ದ ಭಾರತೀಯರ ಬಗ್ಗೆ ಹೇಳಿದ್ದಾರೆ .

ಇಂಥ ಹೋಲಿಕೆ ಮಾಡುವವರಿಗೆ ಕನಿಷ್ಠ ಇತಿಹಾಸದ ಜ್ಞಾನ ಇರಬೇಕು. ಸ್ವಾತಂತ್ರ್ಯ ಹೋರಾಟಗಾರರನ್ನು ಕ್ಷಮಿಸುವಂತೆ ಬಾಪೂಜಿ ಬ್ರಿಟಿಷರಿಗೆ ಆಗ ಪತ್ರವನ್ನು ಬರೆದಿದ್ದರು. ಅವರು ಕ್ಷಮೆ ಕೇಳಿದರೆ ನಾವು ಬಿಟ್ಟು ಬಿಡುತ್ತೇವೆ ಎಂದು ಬ್ರಿಟಿಷರೂ ಹೇಳಿದ್ದರು. ಆದರೆ ಆ ಸ್ವಾತಂತ್ರ್ಯ ಹೋರಾಟಗಾರರು ಸುಳ್ಳು ಒಪ್ಪಿಗೆಯ ಕ್ಷಮೆ ಕೇಳಲು ನಿರಾಕರಿಸಿ ದೇಶಭಕ್ತಿಯಿಂದ ನೇಣಿಗೆ ಏರಿದರು.

ಗಾಂಧೀಜಿಯವರನ್ನು ಕೆಳಮಟ್ಟಕ್ಕೆ ಇಳಿಸಲು ಪ್ರಯತ್ನಿಸುತ್ತಿರುವ ಕೀಳು ಜನರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಹೋರಾಟಗಾರರನ್ನು ನೇಣಿನಿಂದ ಪಾರು ಮಾಡಲು ಬಾಪೂಜಿಯವರೇನೂ ಆಗ ರಾಷ್ಟ್ರದ ಮುಖ್ಯಸ್ಥರಾಗಿರಲಿಲ್ಲ. ಇಂಥ ಅಸಂಬದ್ಧ ಪೊಳ್ಳು ಹೇಳಿಕೆಗಳ ವಿರುದ್ಧ ಬಾಪು ಪ್ರಪಂಚ ಪತ್ರಿಕೆ ಸತ್ಯ ಸಂಗತಿಗಳನ್ನು ಹೇಳಬೇಕು .

–ಪಿ ಎನ್ ಶ್ರೀನಿವಾಸಾಚಾರ್
ನಿವೃತ್ತ ಐ ಎ ಎಸ್ ಅಧಿಕಾರಿ


* * *

ಮಾನ್ಯರೆ,

ಗಾಂಧೀಜಿಯವರನ್ನು ತಮ್ಮ ತೆವಲಿಗಾಗಿ ತೆಗಳುವವರ ನಡುವೆ ಗಾಂಧೀಜಿಯವರ ಪ್ರಸ್ತುತತೆ ಬಗ್ಗೆ ಜನರ ಭಾವನೆಗಳು ಗಟ್ಟಿಯಾಗುತ್ತಿವೆ. ಗಾಂಧೀಜಿಯವರ ಕೋಮು ಸೌಹಾರ್ದತೆ ಇಲ್ಲದೆ ಹೋಗಿದ್ದರೆ ನಮ್ಮ ದೇಶ ಈ ವೇಳೆಗೆ ಪತನಗೊಳ್ಳುತ್ತಿತ್ತು ಎಂದು ಹಲವಾರು ಸಂಘಟನೆಗಳು, ವ್ಯಕ್ತಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ಬಾಪೂ ಪ್ರಪಂಚ ಸ್ಪಂದಿಸಿ ಅವರ ಭಾವನೆ ವ್ಯಕ್ತಪಡಿಸಲು ವೇದಿಕೆ ಕಲ್ಪಿಸಬೇಕು.

ಪ್ರತಿ ವಾರ ಅಥವಾ ಹದಿನೈದು ದಿನಕ್ಕೊಮ್ಮೆ ಗಾಂಧಿ ಭವನದಲ್ಲಿ ಇಂಥ ಕಾರ್ಯಕ್ರಮ ರೂಪಿಸಿ. ನಾವು ನಿಮ್ಮ ಜೊತೆಗಿರುತ್ತೇವೆ.

– ಅಭಿಲಾಶ್, ಶಾರದಾ, ಜಾಹ್ನವಿ
ಯುವ ಗಾಂಧಿ ಕಾರ್ಯಕರ್ತರು, ಬೆಂಗಳೂರು



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.


ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.

2535125000778@cnrb

ಮಹಾತ್ಮ ಗಾಂಧೀಯವರ ಚೈತನ್ಯ :

ಮಾತೆ ಕಸ್ತೂರ ಬಾ



ಕಸ್ತೂರ ಬಾ 1944ರ ಫೆಬ್ರವರಿ 22 ರ ಮಹಾಶಿವರಾತ್ರಿಯಂದು ಈ ಲೋಕವನ್ನಗಲಿದರು.

ಗಾಂಧೀಜಿಯವರು ಬಾ ಅವರನ್ನು ಕುರಿತು ಆಡಿರುವ ಮಾತುಗಳು ಆಕೆಯ ವ್ಯಕ್ತಿತ್ವದ ಪ್ರೋಜ್ವಲತೆಗೆ ಸಾಕ್ಷಿಯಾಗಿವೆ : "ಕಸ್ತೂರ ಬಾ ಉದ್ದಕ್ಕೂ ನನ್ನ ಪೋಷಕಳಾಗಿದ್ದಳು. ಆಕೆಯಿಲ್ಲದಿದ್ದರೆ ನಾನು ಅನಾಥನಾಗುತ್ತಿದ್ದೆ. ಜಗತ್ತಿನಲ್ಲಿ ಮತ್ತಾವ ಹೆಣ್ಣೂ ನನ್ನನ್ನು ಹಾಗೆ ಮಿಡಿಯಲಾರಳು. ಆಕೆಯ ಸಹನೆ ಅದ್ವಿತೀಯ. ಆ ಸಹನೆಯೇ ನನಗೆ ಅಹಿಂಸೆಯ ಪಾಠವನ್ನು ಕಲಿಸಿತು. ಅದೇ ನನ್ನ ತಾರಕ ಮಂತ್ರವಾಯಿತು. ತನ್ನ ಸಹನೆಯ ಬೆಲೆ ಆಕೆಗೇ ಗೊತ್ತಿರಲಿಲ್ಲ. ನಾನು ಅದರ ಅಮಿತವಾದ ಬೆಲೆಯನ್ನರಿತು ಅನುಸರಣೆಗೆ ತಂದೆ. ಆದ್ದರಿಂದ ಈ ವಿಚಾರದಲ್ಲಿ ಆಕೆ ನನಗೆ ಎಂದೆಂದಿಗೂ ಗುರುಸಮಾನಳು".

ಕಸ್ತೂರ ಬಾ ಅವರು 1869 ವರ್ಷದ ಏಪ್ರಿಲ್ 11 ರಂದು ಪೋರ್‌ಬಂದರಿನಲ್ಲಿ ಜನಿಸಿದರು. ತಮ್ಮ ಪತಿ ಮಹಾತ್ಮ ಗಾಂಧಿ ಅವರಿಗಿಂತ ಅವರು 5 ತಿಂಗಳು ಹಿರಿಯರು.

ಕಸ್ತೂರ ಬಾ ಅವರ ತಂದೆ ಗೋಕುಲದಾಸ ಮಾಕಂಜಿ ಮತ್ತು ತಾಯಿ ವೆರಾಜುಂಕವರಬಾ ಅವರಿಗೆ ಕಸ್ತೂರ ಬಾ ಹಿರಿಯ ಮಗಳು. ಮಾಕಂಜಿಯವರಿಗೂ ಗಾಂಧೀಜಿಯ ತಂದೆ ಕರಮಚಂದ್ ಗಾಂಧೀಯವರಿಗೂ ತುಂಬ ಸ್ನೇಹ. ಹೀಗೆ ಕಸ್ತೂರ ಬಾ ಮತ್ತು ಗಾಂಧೀಜಿಯವರ ವಿವಾಹ ನೆರವೇರಿತು. ಆಗ ಅವರಿಬ್ಬರಿಗೂ ಹನ್ನೆರಡು ವರ್ಷ ವಯಸ್ಸು.

ಸಂಪ್ರದಾಯವಂತ ಧನಿಕ ಮನೆತನದಲ್ಲಿ ಬೆಳೆದ ಕಸ್ತೂರ ಬಾ ಅವರಿಗೆ ಓದುಬರಹ ಬರುತ್ತಿರಲಿಲ್ಲ. ಗಾಂಧೀಜಿ ಆಕೆಯನ್ನು ವಿದ್ಯಾವಂತಳನ್ನಾಗಿ ಮಾಡಲು ತುಂಬ ಪ್ರಯತ್ನಪಟ್ಟರು. ಆದರೆ ಅದು ಫಲಿಸಲಿಲ್ಲ. ಕಸ್ತೂರ ಬಾ ಗೆ ಆಗ ಕಲಿಯುವ ಅಗತ್ಯ ಕಾಣಿಸಲಿಲ್ಲ. ಆದರೆ ಮುಂದೆ ಅದಕ್ಕಾಗಿ ಅವರು ಪಶ್ಚಾತ್ತಾಪಪಟ್ಟಿದ್ದುಂಟು. ಅಲ್ಪಸ್ವಲ್ಪ ಗುಜರಾತಿಯನ್ನು ಮಾತ್ರ ಅವರು ಅಭ್ಯಾಸ ಮಾಡಿದ್ದರು.

ಗಾಂಧೀಜಿಗೆ ತಮ್ಮ ಹೆಂಡತಿ ಆದರ್ಶ ಸತಿಯಾಗಬೇಕೆಂಬ ಹೆಬ್ಬಯಕೆಯಿತ್ತು. ಇದಕ್ಕಾಗಿ ಅವರು ಕಸ್ತೂರ ಬಾ

ಚಲನವಲನಗಳ ಮೇಲೆ ನಿರ್ಬಂಧ ಹೇರಿದರು. ಆಕೆ ತಮಗೆ ಸದಾ ವಿಧೇಯಳಾಗಿರಬೇಕೆಂದಾಶಿಸಿದರು. ಕಸ್ತೂರ ಬಾ ಎಂದೂ ಪತಿಗೆ ಅವಿಧೇಯರಾಗಿ ನಡೆಯದಿದ್ದರೂ ಪತಿಯ ಈ ಕಟ್ಟುಕಟ್ಟಳೆಗಳು ಅವರಿಗೆ ಸಹನವಾಗುತ್ತಿರಲಿಲ್ಲ. ಕೆಲವು ವೇಳೆ ಗಾಂಧೀಜಿಯ ಅಪ್ಪಣೆಯಿಲ್ಲದೆ ದೇವಸ್ಥಾನಕ್ಕೋ ಗೆಳತಿಯರ ಮನೆಗೋ ಹೋಗುತ್ತಿದ್ದರು. ಇದು ಗಾಂಧೀಜಿಗೆ ಅಪರಾಧವಾಗಿ ತೋರಿ ಅದು ಮುನಿಸಿನಲ್ಲಿ ಪರ್ಯವಸಾನವಾಗುತ್ತಿತ್ತು. ಕೋಪದಲ್ಲಿ ಒಮ್ಮೆ ಹೆಂಡತಿಯನ್ನು ತೌರುಮನೆಗೆ ಕಳುಹಿಸಿಬಿಟ್ಟಿದ್ದೂ ಉಂಟು. ಕಸ್ತೂರ ಬಾ ತುಟಿ ಎರಡು ಮಾಡದೆ ಇದೆಲ್ಲವನ್ನು ಸಹಿಸಿದರು. ತಮ್ಮ ಈ ವರ್ತನೆಗಾಗಿ ಗಾಂಧೀಜಿ ಮುಂದೆ ಜಿಗುಪ್ಸೆ ಪಟ್ಟುಕೊಂಡರು.

ಇಂಗ್ಲೆಂಡಿನಲ್ಲಿ ಬಾರ್-ಆಟ್-ಲಾ ವ್ಯಾಸಂಗವನ್ನು ಮುಗಿಸಿ ಮರಳಿದ ಗಾಂಧೀಜಿ ವಕೀಲಿ ವೃತ್ತಿ ಕೈಗೊಂಡರು. ಆದರೆ ಅದರಲ್ಲಿ ಯಶಸ್ಸು ಸಿಗಲಿಲ್ಲ. ಅಷ್ಟರಲ್ಲಿ ದಕ್ಷಿಣ ಆಫ್ರಿಕದಿಂದ ಅವರಿಗೆ ಕರೆ ಬಂತು. ಮೊಕದ್ದಮೆಯೊಂದನ್ನು ನಡೆಸಿಕೊಡಲು ಹೋದ ಗಾಂಧೀಜಿ ಮೂರು ವರ್ಷ ಅಲ್ಲಿಯೇ ನಿಂತರು. ವಿದೇಶೀಯರ ದಬ್ಬಾಳಿಕೆಯಿಂದ ನರಳುತ್ತಿದ್ದ ಭಾರತೀಯರ ಉದ್ಧಾರಕ್ಕೆ ಕಂಕಣತೊಟ್ಟರು. ಮೂರು ವರ್ಷಗಳ ಅನಂತರ ಭಾರತಕ್ಕೆ ಮರಳಿ, ಕಸ್ತೂರ ಬಾ ಮತ್ತು ಎರಡು ಮಕ್ಕಳೊಂದಿಗೆ ಮತ್ತೆ ಆಫ್ರಿಕಕ್ಕೆ ಹೊರಟರು.

ವಿದೇಶದಲ್ಲಿ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಸಂಸಾರ ಆರಂಭವಾಯಿತು. ಉನ್ನತಾದರ್ಶ ಧ್ಯೇಯ ಸಾಧನೆಗಾಗಿ ಅನವರತ ಶ್ರಮಿಸುತ್ತಿದ್ದ ಗಾಂಧೀಜಿಯವರೊಡನೆ ಬಾಳು ನಡೆಸುವಾಗ ಕಸ್ತೂರ ಬಾ ಅನೇಕ ಅಗ್ನಿಪರೀಕ್ಷೆಗಳನ್ನೆದುರಿಸಬೇಕಾಯಿತು. ಒಮ್ಮೆ ಅವರ ಮನೆಗೆ ಬಂದಿದ್ದ ಹರಿಜನರೊಬ್ಬರ ಕಲ್ಮಶಪಾತ್ರೆಯನ್ನು ತೊಳೆಯಲು ಬಾ ನಿರಾಕರಿಸಿದರು. ಕೋಪಗೊಂಡ ಗಾಂಧೀಜಿ ಅವರನ್ನು ಮನೆಯಿಂದಾಚೆ ತಳ್ಳಲು ಹೊರಟರು. ಬಾ ಅಳುತ್ತಾ, ಅಯ್ಯೋ ಇದೇನು ನಿಮಗೆ ಸ್ವಲ್ಪವೂ ನಾಚಿಕೆಯಿಲ್ಲವೇ, ಈ ವಿದೇಶದಲ್ಲಿ ನಾನೆಲ್ಲಿಗೆ ಹೋಗಲಿ ? ಇಲ್ಲಿ ನನಗೆ ಯಾರಿದ್ದಾರೆ ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಾನು ಈ ಎಲ್ಲ ಅವಮಾನಗಳನ್ನೂ ಸಹಿಸಿಕೊಂಡಿರಬೇಕೆ ? ನಿಮ್ಮ ದಮ್ಮಯ್ಯ, ದಯವಿಟ್ಟು ಬಾಗಿಲು ಮುಚ್ಚಿ. ನೋಡಿದವರೇನಂದಾರು ? ಎಂದು ದೈನ್ಯವಾಣಿಯಿಂದ ನಿವೇದಿಸಿಕೊಂಡರು. ಈ ಮಾತುಗಳನ್ನು ಕೇಳಿ ಗಾಂಧೀಜಿಗೆ ನಾಚಿಕೆಯಾಯಿತು. ತಮ್ಮ ಹೆಂಡತಿ ತಮ್ಮನ್ನು ಬಿಟ್ಟಿರಲು ಅಸಾಧ್ಯವಾದರೆ ಆಕೆಯನ್ನು ಬಿಟ್ಟಿರುವುದಕ್ಕೆ ತಮಗೂ ಸಾಧ್ಯವಿಲ್ಲ ಎಂದು ಬಗೆದರು.

ಮತ್ತೊಮ್ಮೆ ಇಂಥದ್ದೇ ಪ್ರಸಂಗವೊಂದು ನಡೆಯಿತು. ಗಾಂಧೀಜಿ ವಿದೇಶದಿಂದ ಭಾರತಕ್ಕೆ ಮರಳುವಾಗ ಅಲ್ಲಿಯ ಭಾರತೀಯರೆಲ್ಲ ಅವರಿಗೆ ಅನೇಕ ಕಾಣಿಕೆಗಳನ್ನು ಕೊಟ್ಟರು. ಗಾಂಧೀಜಿಗೆ ಅವುಗಳನ್ನು ತೆಗೆದುಕೊಂಡು ಹೋಗಲಿಷ್ಟವಿರಲಿಲ್ಲ. ಆದರೆ ಇದಕ್ಕೆ ಬಾ ಅವರನ್ನೊಪ್ಪಿಸುವುದು ತುಂಬಾ ಕಷ್ಟವಾಯಿತು. ಬಾ ಎಷ್ಟೆಷ್ಟೋ ವಾದಿಸಿದರೂ ಗಾಂಧೀಜಿಯ ನಿರ್ಧಾರ ಬದಲಾಗಲಿಲ್ಲ. ಕೊನೆಗೆ ಆ ಒಡವೆ ವಸ್ತುಗಳನ್ನೆಲ್ಲ ಅಲ್ಲಿಯೇ ಬಿಟ್ಟುಬರಲೊಪ್ಪಿದರು. ಹೀಗೆ ಅವರ ಆರಂಭದ ಸಂಸಾರ ಜೀವನದಲ್ಲಿ ಹಲವು ವಿರಸಗಳು ಬರುತ್ತಿದ್ದರೂ ಅವು ಶಾಂತಿಯಲ್ಲಿ ಮುಕ್ತಾಯವಾಗುತ್ತಿದ್ದವು. ಕಸ್ತೂರ ಬಾರವರ ಸಹನೆಯೇ ಕೊನೆಗೆ ಗೆಲ್ಲುತ್ತಿತ್ತು.

ಕಸ್ತೂರ ಬಾ ಎಂತಹ ಸಂಕಷ್ಟ ಬಂದರೂ ಸಂಪ್ರದಾಯ ನಿಷ್ಠೆಯನ್ನು ಬಿಟ್ಟವರಲ್ಲ. ಆಚಾರ ವ್ಯವಹಾರಗಳನ್ನು ಮೀರಿ ನಡೆದವರಲ್ಲ. ಮೊದಲಿನಿಂದಲೂ ಅವರು ಬೆಳೆದ ವಾತಾವರಣ ಅಂಥದಾಗಿತ್ತು. ಒಮ್ಮೆ ಆಫ್ರಿಕದಲ್ಲಿದ್ದಾಗ ಅವರು ತೀವ್ರ ಕಾಯಿಲೆಗೊಳಗಾದರು. ಅದು ವಾಸಿಯಾದ ಮೇಲೆ ಶಕ್ತಿಗೊಡಲು ಮಾಂಸದ ಕಷಾಯವನ್ನು ಕುಡಿಯುವಂತೆ ವೈದ್ಯರು ಸೂಚಿಸಿದರು. ಆದರೆ ಆಕೆ ತಮ್ಮ ಪ್ರಾಣ ಹೋದರೂ ಮಾಂಸದ ಕಷಾಯವನ್ನು ಮುಟ್ಟುವುದಿಲ್ಲವೆಂದರು. ಗಾಂಧೀಜಿಯವರಿಗೂ ಅವರ ನಿರ್ಧಾರ ಸಂತೋಷವನ್ನೇ ತಂದಿತು.

ಬಾ ಮತ್ತು ಬಾಪೂರವರ ಬಾಳಿನಲ್ಲಿ 1906 ಮಹತ್ವದ ವರ್ಷ. ಆಗ ಗಾಂಧೀಜಿ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದರು. ಕಸ್ತೂರ ಬಾ ಸಂತೋಷದಿಂದ ಅದಕ್ಕೆ ಸಮ್ಮತಿಯಿತ್ತರು. ಅವರ ಚಿತ್ತಸ್ಥೈರ್ಯ ಮತ್ತು ಅಪೂರ್ವ ಸಂಯಮಗಳನ್ನು ಕಂಡು ಗಾಂಧೀಜಿಯವರೇ ಬೆರಗಾದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ಆರಂಭಿಸಿದ ಸತ್ಯಾಗ್ರಹ ಚಳವಳಿಯಲ್ಲಿ ಕಸ್ತೂರ ಬಾ ಸ್ವಸಂತೋಷದಿಂದ ಭಾಗವಹಿಸಿದರು; ಆರು ವರ್ಷಗಳ ಕಾಲ ನಡೆದ ದೀರ್ಘ ಚಳವಳಿಯಲ್ಲಿ ಅನೇಕ ಬಾರಿ ಸೆರೆಗೆ ಹೋದರು. ಅವರ ಶ್ರದ್ಧೆ ಸಾಹಸಗಳನ್ನು ಕಂಡು ಎಲ್ಲರಿಗೂ ಬೆರಗಾಯಿತು. ಕಟ್ಟಕಡೆಗೆ ಜಯಗಳಿಸಿದ ಗಾಂಧೀಜಿಯವರನ್ನು ಕಂಡು ಬಾ ಕೃತಾರ್ಥರಾದರು. ಕೇವಲ ತಮ್ಮ ಸಂಸಾರದ ಜೀವನೋಪಾಯವನ್ನು ಗಳಿಸುವುದಕ್ಕೆ ದೇಶ ಬಿಟ್ಟು ಹೊರಟ ದಂಪತಿಗಳು ನೂರಾರು ಸಂಸಾರಗಳಿಗೆ ಜೀವನೋಪಾಯವನ್ನು ತೋರಿಸಿಕೊಟ್ಟು ಸ್ವದೇಶಕ್ಕೆ ಹಿಂದಿರುಗಿದರು.

ಗಾಂಧೀಜಿ ಸಬರ್ಮತಿಯಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ಕಸ್ತೂರ ಬಾ ಅವರೇ ಮೊಟ್ಟಮೊದಲ ಶಿಷ್ಯೆ. ಇಡೀ ಆಶ್ರಮವೇ ಆಕೆಯ ಸಂಸಾರವಾಯಿತು. ಆಶ್ರಮದ ಎಲ್ಲ ಜವಾಬ್ದಾರಿಗಳನ್ನೂ ದಕ್ಷತೆಯಿಂದ ನಿರ್ವಹಿಸುತ್ತ ಅಲ್ಲಿಯ ಪ್ರತಿಯೊಬ್ಬ ನಿವಾಸಿಗೂ ಅವರು ತಾಯಿಯಂತಿದ್ದರು. ಅಲ್ಲಿಯೂ ಆಕೆ ಗಾಂಧೀಜಿಯ ಕಠಿಣ ಪರೀಕ್ಷೆಗಳಿಗೊಳಬೇಕಾಯಿತು. ಆಶ್ರಮದಲ್ಲಿ ಅಸ್ಪೃಷ್ಯ ಸಂಸಾರವೊಂದು ನೆಲೆಸಿದಾಗ ಆಶ್ರಮದ ಇತರರಂತೆ ಬಾ ಅವರಿಗೂ ಅಸಮಾಧಾನವಾಯಿತು. ಇದರಿಂದ ನೊಂದ ಗಾಂಧೀಜಿಯವರು ಉಪವಾಸ ಕೈಗೊಂಡರು. ಕೊನೆಗೆ ಬಾ ಸಂಪೂರ್ಣವಾಗಿ ಬದಲಾದರು. ಅಂದಿನಿಂದ ಅಸ್ಪೃಷ್ಯತೆ ಎಂಬುದು ಅವರ ಮನಸ್ಸಿನಲ್ಲಿ ಇಣುಕಲಿಲ್ಲ. ಗಾಂಧೀಜಿ ಹರಿಜನರ ಮೇಲ್ಮೆಗಾಗಿ ಕೈಗೊಂಡ ಪ್ರತಿಯೊಂದು ಕಾರ್ಯದಲ್ಲೂ ನೆರವಾಗಿ ನಿಂತು ಹೃತ್ಪೂರ್ವಕವಾಗಿ ಸೇವೆ ಸಲ್ಲಿಸಿದರು. ಇಷ್ಟೇ ಅಲ್ಲ, ಲಕ್ಷ್ಮಿ ಎಂಬ ಅನಾಥ ಹರಿಜನ ಕನ್ಯೆಯೊಬ್ಬಳನ್ನು ಅವರು ಸಾಕಿ ಸಲಹಿದರು.

1936ರಲ್ಲಿ ಅಮೃತಸರದಲ್ಲಿ ಏರ್ಪಡಿಸಿದ್ದ ಹರಿಜನರ ಮಹಾಸಭೆಗೆ ಬಾ ಅವರೇ ಅಧ್ಯಕ್ಷಿಣಿ. ಅಂದು ಅವರು ಮಾಡಿದ ಸರಳ ಭಾಷಣದಲ್ಲಿ ಹರಿಜನರ ಬಗೆಗಿನ ಅನುಕಂಪ ಸಹಾನುಭೂತಿಗಳು ಸುವ್ಯಕ್ತವಾಗಿವೆ. ದ್ರವ್ಯ ಸಂಚಯ ಮಾಡುವುದು ಗಾಂಧೀಜಿಯವರ ಆದರ್ಶಕ್ಕೆ ವಿರೋಧವಾಗಿದ್ದಿತು. ಬಾ ತಮ್ಮ ಬಳಿಯಲ್ಲಿಟ್ಟುಕೊಂಡಿದ್ದ ಒಂದೆರಡು ರೂಪಾಯಿಗಳ ಸಮಾಚಾರ



ಗಾಂಧೀಜಿಯವರಿಗೆ ಹೇಗೋ ತಿಳಿದು ಆಶ್ರಮದ ನಿವಾಸಿಗಳೆಲ್ಲರೆದುರಿಗೆ ಅದನ್ನು ಬಹಿರಂಗಪಡಿಸಿದರು. ಮತ್ತೊಮ್ಮೆ ಆಶ್ರಮದ ನಿವಾಸಿಯೊಬ್ಬರು ಅಸ್ವಸ್ಥರಾದಾಗ ಅವರಿಗೆ ತಕ್ಕ ಶುಶ್ರೂಷೆ ಮಾಡಲಿಲ್ಲವೆಂದು ತಿಳಿದು ಗಾಂಧೀಜಿ ಬಾ ಅವರನ್ನು ಎಲ್ಲರೆದುರಿಗೂ ಆಕ್ಷೇಪಣೆ ಮಾಡಿದರು. ಮರುಮಾತನಾಡದೆ ಬಾ ಈ ನೋವು ಅವಮಾನಗಳನ್ನು ನುಂಗಿದರು.

1917ರಲ್ಲಿ ರೈತರ ಉದ್ಧಾರಕ್ಕಾಗಿ ಗಾಂಧೀಜಿ ಚಂಪಾರಣ್ಯದಲ್ಲಿ ಚಳವಳಿ ಪ್ರಾರಂಭಿಸಿದಾಗ ಕಸ್ತೂರ ಬಾ ಎಂದಿನಂತೆ ಪತಿಯ ದಾರಿಯಲ್ಲಿ ಅತ್ಯಾನಂದದಿಂದ ನಡೆದರು. ಹಳ್ಳಿ ಹಳ್ಳಿಗೂ ಹೋಗಿ ಅಲ್ಲಿಯ ಜನರಿಗೆ ಶಿಸ್ತು, ಶುಚಿ, ಸದಾಚಾರ, ಸದ್ವರ್ತನೆಗಳನ್ನು ಹೇಳಿಕೊಟ್ಟರು. ಮುಂದೆ ಪತಿಯೊಡನೆ ಅವರು ಕೈಗೊಂಡ ರಾಷ್ಟ್ರಸೇವೆಗೆ ಈ ಚಳುವಳಿಯೇ ನಾಂದಿಯಾಯಿತು. ಅನಂತರ ಗಾಂಧೀಜಿ ಕೈಗೊಂಡ ಪ್ರತಿಯೊಂದು ಚಳವಳಿಯಲ್ಲೂ ಬಾ ಭಾಗವಹಿಸಿ ನಿರ್ಭಯದಿಂದ ತಮ್ಮ ಶಕ್ತಿಮೀರಿ ದೇಶಸೇವೆ ಮಾಡಿದರು. 1922ರ ಅಸಹಕಾರ ಚಳವಳಿಯ ಕಾಲದಲ್ಲಿ ಗಾಂಧೀಜಿಯವರು ಬಂಧನಕ್ಕೊಳಗಾದಾಗ ಅವರ ಸ್ಥಾನದಲ್ಲಿ ನಿಂತು ದಿಕ್ಕುಗೆಟ್ಟ ಜನತೆಗೆ ಮಾರ್ಗದರ್ಶನ ನೀಡಿ, ರಚನಾತ್ಮಕ ಹೋರಾಟಕ್ಕೆ ಕರೆಯಿತ್ತವರು ಕಸ್ತೂರ ಬಾ.

1930ರಲ್ಲಿ ಕಾನೂನುಭಂಗ ಚಳವಳಿಯ ಬಿಸಿ ದೇಶದೆಲ್ಲೆಡೆ ವ್ಯಾಪಿಸಿತು. ಆಗ ಕಸ್ತೂರ ಬಾ ವಿಶ್ರಾಂತಿಯಿಲ್ಲದೆ ಹಗಲಿರುಳು ಒಂದೇ ಸಮನಾಗಿ ದುಡಿದರು. ಜನತೆಯ ಕರೆ ಬಂದೆಡೆ ಅವರು ಪ್ರತ್ಯಕ್ಷರಾಗುತ್ತಿದ್ದರು. ಸ್ಥಳೀಯ ಮುಖಂಡರನ್ನು ಕಾಣುತ್ತ, ಆಯಾ ಪ್ರದೇಶಗಳ ವಿದ್ಯಮಾನಗಳನ್ನು ಪರಿಶೀಲಿಸುತ್ತ, ಅಗತ್ಯಬಿದ್ದಾಗ ಹೇಳಿಕೆಗಳನ್ನು ಕೊಡುತ್ತ, ಆಗಾಗ್ಗೆ ಆಸ್ಪತ್ರೆಗಳಿಗೆ ಹೋಗಿ ಸತ್ಯಾಗ್ರಹಿಗಳ ಯೋಗಕ್ಷೇಮವನ್ನು ವಿಚಾರಿಸುತ್ತ, ಜನತೆಯಲ್ಲಿ ಧೈರ್ಯವನ್ನು ತುಂಬುತ್ತ ಅವರು ಅವಿರತವಾಗಿ ಶ್ರಮಿಸುತ್ತಿದ್ದರು. ಪತಿಯ ಪ್ರತಿನಿಧಿಯಾಗಿ ಜನತೆಯ ಮಧ್ಯೆ ನಿಂತು ಕಾಂಗ್ರೆಸಿನ ಸೂತ್ರವನ್ನು ಹಿಡಿದು ಕಾರ್ಯಭಾರ ನಿರ್ವಹಿಸಿದ ರೀತಿ ಅತ್ಯಾಶ್ಚರ್ಯಕರವಾದುದು. ಅವರ ದೇಹದ ದುರ್ಬಲತೆಯನ್ನು ಗಮನಿಸಿ ವೈದ್ಯರು ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದಾಗ, "ಬಾಪೂವಿನ ಸ್ಥಾನದಲ್ಲಿ ನಿಂತು, ಅವರ ಹಾಗೆ ಕೆಲಸ ಮಾಡುವ ಇಂಥ ಸಮಯಗಳು ನನ್ನ ಬಾಳಿನಲ್ಲಿ ಅಪೂರ್ವ. ಆದ್ದರಿಂದ ನನಗೀಗ ವಿಶ್ರಾಂತಿಯ ಯೋಚನೆಯೇ ಇಲ್ಲ" ಎಂದು ಉತ್ತರಿಸಿದರು. ಅವರು ಮಾತೃವಾತ್ಸಲ್ಯದಿಂದ ಆಡುತ್ತಿದ್ದ ಮಾತುಗಳು ಜನತೆಯ ಹೃದಯವನ್ನು ನೇರವಾಗಿ ಮುಟ್ಟುತ್ತಿದ್ದುವು. ನೊಂದವರು ಸೋತವರು ಕುಗ್ಗಿದವರು ಆಕೆಯ ಆಶ್ರಯ ಬಯಸುತ್ತಿದ್ದರು. ಅವರಿಗೆ ಅಲ್ಲಿ ಅಪೂರ್ವವಾದ ಸಾಂತ್ವನ ದೊರೆಯುತ್ತಿತ್ತು. ಹೆಂಡತಿ ಮತ್ತು ಮಗಳನ್ನು ಕಳೆದುಕೊಂಡ ರೈತನೊಬ್ಬ ಮೂರು ತಿಂಗಳ ಕೂಸಿನೊಡನೆ ಬಾ ಅವರ ಬಳಿಗೆ ದೀನನಾಗಿ ಬಂದಾಗ ಬಾ ಅವನಿಗೆ ಆಶ್ರಯ ನೀಡಿದರು. ತನ್ನ ಒಬ್ಬನೇ ಮಗ ಬಾ ಅವರೊಂದಿಗೆ ಹಳ್ಳಿಹಳ್ಳಿಗಳನ್ನು ಸುತ್ತುತ್ತಿದ್ದುದನ್ನು ಕಂಡು ನೊಂದ ತಾಯಿಯೊಬ್ಬಳಿಗೆ ಬಾ ಹೇಳಿದರು : ನಿನಗೆ ಒಬ್ಬನೇ ಮಗನ ಯೋಚನೆ. ನನಗಾದರೋ ಮೂರು ಮಕ್ಕಳಿದ್ದಾರೆ. ಆದರೆ ಎಲ್ಲರೂ ದೂರವಿದ್ದಾರೆ. ಅವರು ದೇಶಕ್ಕಾಗಿ ದುಡಿಯುತ್ತಿದ್ದಾರೆಂಬುದೇ ನನಗೆ ತೃಪ್ತಿ. ಮೊರೆ ಹೊಕ್ಕವರನ್ನು ಮೃದುವಾದ ಮಾತುಗಳಿಂದ ಸಂತೈಸುವ ಜಾಣ್ಮೆ ಆಕೆಯಲ್ಲಿತ್ತು. ಆಕೆಯ ಮಾತುಗಳು ಜನತೆಗೆ ಅಮೃತಸೇಚನ ಮಾಡುತ್ತಿದ್ದವು. ದೇಹಾರೋಗ್ಯವಿಲ್ಲದಿದ್ದರೂ ಬಾ ದುರ್ಗಮವಾದ ದಾರಿಗಳಲ್ಲಿ ನಡೆದು, ಹಳ್ಳಿಹಳ್ಳಿಗೆ ಹೋಗಿ, ಜನರಲ್ಲಿ ಉತ್ಸಾಹ ಚೈತನ್ಯಗಳನ್ನು ತುಂಬುತ್ತಿದ್ದರು; ಅವರಿಗೆ ಅಗತ್ಯವಾದ ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿದ್ದ ದೃಢನಿರ್ಧಾರ, ಆತ್ಮಸಂಯಮಗಳು ದೇಹ ದೌರ್ಬಲ್ಯವನ್ನು ಮೆಟ್ಟಿ ನಿಂತವು. ಈ ಅವಿರತವಾದ ದೇಶಪರ್ಯಟನೆಯಲ್ಲಿ ಅವರು ತಮ್ಮ ನಿತ್ಯನಿಯಮಗಳನ್ನೆಂದು ಮೀರಿ ನಡೆದವರಲ್ಲ. ಆಶ್ರಮದಲ್ಲಿದ್ದಾಗ ನಡೆಯುತ್ತಿದ್ದಂತೆಯೇ ಪ್ರಾತಃಕಾಲ ನಾಲ್ಕು ಗಂಟೆಗೇ ಎದ್ದು ದೇವರ ಪ್ರಾರ್ಥನೆ ಮಾಡಿ, ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಅವರ ಆಹಾರ ಜೋಳದ ರೊಟ್ಟಿ ಮತ್ತು ಉಪ್ಪಿಲ್ಲದ ಒಂದಿಷ್ಟು ತರಕಾರಿ. ಸರಳತೆ ಅವರ ಬದುಕಿನ ಜೀವಾಳ. ಅಬ್ಬರ ಆಡಂಬರಗಳಿಗೂ ಅವರಿಗೂ ಬಹುದೂರ. ದಿಕ್ಕುಗೆಟ್ಟ ಜನರನ್ನು ಹುರಿದುಂಬಿಸಿ







ಒಟ್ಟುಗೂಡಿಸುವ ಶಕ್ತಿ, ಹಿಡಿದ ಕಾರ್ಯದಲ್ಲಿ ಶ್ರದ್ಧೆಭಕ್ತಿಗಳನ್ನಿಟ್ಟು ಅದನ್ನು ನಿರ್ವಹಿಸುವ ಸಾಮರ್ಥ್ಯ, ಸರಸವಾಗಿ ಮಾತಾಡಿ ಜನರನ್ನು ಗೆಲ್ಲುವ ಬಲ್ಮೆ, ನಿರಾಶೆಯಲ್ಲಿ ಮಂಕು ಕವಿದು ಕಾರ್ಯಭಂಗವಾಗದಂತೆ ಮುಂದುವರಿಯುವ ಮೇಲ್ಮೆ, ಗುರಿಯನ್ನಾಗಲಿ ಗಂಡ ಹಾಕಿಕೊಟ್ಟ ಮೇಲ್ಪಂಕ್ತಿಯನ್ನಾಗಲಿ ಮರೆಯದಂತೆ ತಪ್ಪದೆ ನೆರವೇರಿಸುವ ನಿಷ್ಠೆ ಈ ಎಲ್ಲ ಗುಣಗಳು ಅವರ ರಾಷ್ಟ್ರಸೇವಾಕಾರ್ಯದಲ್ಲಿ ಬೆಳಕಿಗೆ ಬಂದುವು.

ಈ ಎಲ್ಲ ಚಟುವಟಿಕೆಗಳಲ್ಲಿ ತೊಡಗಿದ್ದಾಗ 1932 ರಲ್ಲಿ ಕಸ್ತೂರ ಬಾ ಸೆರೆಮನೆಗೆ ಹೋಗಬೇಕಾಯಿತು. ಬಾರ್ದೋಲಿಯ ಸೆರೆಮನೆಯಲ್ಲಿ ಆರು ತಿಂಗಳ ಕಠಿಣ ಕಾರಾಗೃಹ ವಾಸವನ್ನೂ ಧೈರ್ಯದಿಂದ ಎದುರಿಸಿದರು.

1935 ರ ಅನಂತರ ಗಾಂಧೀಜಿ ಚಳವಳಿ ನಿಲ್ಲಿಸಿ ವರ್ಧಾ ಬಳಿ ಸೇವಾಗ್ರಾಮದಲ್ಲಿ ತಮ್ಮ ಹೊಸ ಆಶ್ರಮ ಸ್ಥಾಪಿಸಿದರು. ಕಸ್ತೂರ ಬಾ ಅವರೇ ಆಶ್ರಮದ ಮೇಲ್ವಿಚಾರಣೆಯ ಹೊಣೆ ಹೊತ್ತರು. ಆ ವೇಳೆಗೆ ವಯಸ್ಸು ಮಾರ್ಪಾಡುಗಳನ್ನುಂಟು ಮಾಡಿದ್ದರೂ ಮನಸ್ಸು ಮಾತ್ರ ಚಿರತಾರುಣ್ಯದ ಚಿಲುಮೆಯಾಗಿತ್ತು. ಅನಾರೋಗ್ಯದಿಂದ ದೇಹದಾರ್ಢ್ಯ ಕುಗ್ಗಿದ್ದರೂ ಉತ್ಸಾಹ ತಗ್ಗಿರಲಿಲ್ಲ. ಆಶ್ರಮದ ನಿತ್ಯಕಾರ್ಯಗಳಲ್ಲಿ ಮಗ್ನರಾಗಿರುತ್ತಿದ್ದ ಅವರನ್ನು ನೋಡಿದರೆ ಆಕೆ ಒಬ್ಬ ಆದರ್ಶ ಗೃಹಿಣಿಯಂತೆ ಕಂಡುಬರುತ್ತಿದ್ದರೇ ಹೊರತು ದೇಶಕ್ಕಾಗಿ ಜೀವವನ್ನೇ ಮುಡುಪಿಟ್ಟು ಸಹಸ್ರಾರು ಸಂಕಷ್ಟಗಳನ್ನನುಭವಿಸಿದ ನಾಯಕಿಯಂತೆ ಕಂಡುಬರುತ್ತಿರಲಿಲ್ಲ. ಇಷ್ಟರಲ್ಲಿ ಕಸ್ತೂರ ಬಾ ಮಾತೃ ಹೃದಯಕ್ಕೆ ದೊಡ್ಡ ಆಘಾತವನ್ನುಂಟುಮಾಡಿದ ಒಂದು ಸನ್ನಿವೇಶ ಒದಗಿತು. ಅದು ಆಕೆಯ ಮಗ ಹರಿಲಾಲ್ ಚಾರಿತ್ರ್ಯ ಹೀನನಾಗಿ ಮುಸಲ್ಮಾನ್ ಮತಕ್ಕೆ ಸೇರಿದ್ದು. ಆ ಸಮಯದಲ್ಲಿ ಆಕೆ ಮಗನಿಗೆ ಬರೆದ ದೀರ್ಘಪತ್ರದಲ್ಲಿ ಮಾತೃಹೃದಯದ ವೇದನೆ ವ್ಯಕ್ತವಾಗುತ್ತದೆ. ಆಕೆಯ ಮಮತೆ ಕುರುಡಾಗಿರಲಿಲ್ಲ. ಅವರು ಬಿಚ್ಚುಹೃದಯದಿಂದ ಮಗನ ವರ್ತನೆಯನ್ನು ಅದರಲ್ಲಿ ಖಂಡಿಸಿದ್ದಾರೆ. ಅದರಲ್ಲಿ ಕೋಪದ ಬಿಸಿಯಿಲ್ಲ, ಪಶ್ಚಾತ್ತಾಪದ ಕಣ್ಣೀರಿದೆ. ಬಾ ಅಪೂರ್ವ ಸಹನೆಯಿಂದ ಸಂಕಟವನ್ನು ನುಂಗಿದರು; ದೇಶಕ್ಷೇಮದಲ್ಲಿ ಮೈಮರೆತರು.

1939 ರಲ್ಲಿ ರಾಜಕೋಟೆಯಲ್ಲಿ ಮತ್ತೆ ಆಂದೋಲನ ನಡೆದಾಗ ಕಸ್ತೂರ ಬಾ ದೇಹ ದುರ್ಬಲವಾಗಿದ್ದರೂ ಚಳವಳಿಯಲ್ಲಿ ಭಾಗವಹಿಸಿ ಮತ್ತೆ ಸೆರೆ ಸೇರಿದರು. ಆ ಕಾಲದಲ್ಲೇ ಗಾಂಧೀಜಿ ಆಮರಣಾಂತ ಉಪವಾಸ ಕೈಗೊಂಡಿದ್ದು. ಇದರಿಂದ ಮೊದಲಿಗೆ ಬಾ ತಳಮಳಗೊಂಡರೂ ಅನಂತರ ಪತಿಯ ಕ್ಷೇಮಕ್ಕಾಗಿ ಭಗವಂತನಲ್ಲಿ ಸಂಪೂರ್ಣ ಶರಣಾದರು. ಗಾಂಧೀಜಿ ಉಪವಾಸ ಕೈಗೊಂಡಾಗಲೆಲ್ಲ ಅವರು ಭಗವಂತನಲ್ಲಿ ಮೊರೆ ಹೋಗುತ್ತಿದ್ದರು. ಭಗವಂತನಲ್ಲಿದ್ದ ಅವರ ಈ ಅಚಲವಾದ ಶ್ರದ್ಧಾಭಕ್ತಿಗಳು ಗಾಂಧೀಜಿಗೆ ವಜ್ರಕವಚದಂತಿದ್ದುವು. ರಾಜಕೋಟೆಯ ಪ್ರಕರಣ ಮುಗಿದ ಮೇಲೆ ಗಾಂಧೀದಂಪತಿಗಳು ಮತ್ತೆ ಸೇವಾಗ್ರಾಮವನ್ನು ಸೇರಿದರು.

1942 ರಲ್ಲಿ ಸ್ವಾತಂತ್ರ್ಯ ಚಳವಳಿಯ ಜ್ವಾಲೆ ಮತ್ತೊಮ್ಮೆ ದೇಶವನ್ನೆಲ್ಲ ವ್ಯಾಪಿಸಿತು. ಆಗಸ್ಟ್ 9ರಂದು ಗಾಂಧೀಜಿಯಾದಿಯಾಗಿ ದೇಶದ ನಾಯಕರೆಲ್ಲ ಸೆರೆ ಸೇರಿದರು. ಅದೇ ಸಂಜೆ ಗಾಂಧೀಜಿ ಬೊಂಬಾಯಿಯ ಶಿವಾಜಿಪಾರ್ಕಿನಲ್ಲಿ ಉಪನ್ಯಾಸ ಮಾಡಬೇಕಾಗಿತ್ತು. ಪತಿಯ ಪ್ರತಿನಿಧಿಯಾಗಿ ಕಸ್ತೂರ ಬಾ ಆ ಕೆಲಸವನ್ನು ನಿರ್ವಹಿಸಲು ನಿರ್ಧರಿಸಿದರು. ಆದರೆ ಅಷ್ಟರಲ್ಲಿಯೇ ಪೋಲೀಸರು ಆಕೆಯನ್ನು ಬಂಧಿಸಿ ಆಗಾಖಾನ್ ಅರಮನೆಗೆ ಒಯ್ದರು. ಅಲ್ಲಿಂದ ಅವರಿಗೆ ಮತ್ತೆ ಬಿಡುಗಡೆಯಾಗಲಿಲ್ಲ. ಮೃತ್ಯು ಅವರನ್ನು ಈ ಪ್ರಪಂಚದಿಂದಲೇ ಶಾಶ್ವತವಾಗಿ ಬಿಡುಗಡೆ ಮಾಡಿತು.

1943ರ ಮಾರ್ಚ್ 12 ರಂದು ಕಸ್ತೂರ ಬಾ ಎರಡು ಬಾರಿ ಹೃದಯವೇದನೆಗೊಳಗಾದರು. ಅಲ್ಲಿಂದಾಚೆಗೆ ಅವರ ಆರೋಗ್ಯ ಕ್ಷೀಣಿಸುತ್ತ ಬಂತು. 1944 ರ ಫೆಬ್ರವರಿ 22ರ ಮಹಾಶಿವರಾತ್ರಿಯಂದು ಪತಿಯ ತೊಡೆಯ ಮೇಲೊರಗಿದ್ದಂತೆಯೇ ಬಾ ಅವರ ಆತ್ಮ ಅನಂತದಲ್ಲಿ ಲೀನವಾಗಿ ಯೋಯಿತು. ಆ ಮಹಾಸತಿಯ ಪಾರ್ಥಿವಶರೀರ ಕಣ್ಮರೆಯಾದರೂ ಆಕೆಯ ಕೀರ್ತಿ ಅಜರಾಮರವಾಯಿತು. ಸಹನೆ ಸಂಯಮ ಔದಾರ್ಯಗಳು ಆಕೆಯಲ್ಲಿ ಮುಪ್ಪುರಿಗೊಂಡಿದ್ದುವು. ಯಾವ ಮಹತ್ವಾಕಾಂಕ್ಷೆಯಾಗಲೀ, ಕೀರ್ತಿಕಾಮನೆಯಾಗಲಿ ಅವರಲ್ಲಿರಲಿಲ್ಲ. ಸಂಕುಚಿತ ಸಂಸಾರದ ಅನುರಾಗ ಅಭಿಮಾನಗಳನ್ನು ತೊರೆದು ವಿಶ್ವಕುಟುಂಬದ ಹೊಣೆ ಹೊತ್ತು ದೇಶಸೇವೆಗಾಗಿ ಗಂಡ ಮತ್ತು ಮಕ್ಕಳನ್ನು ಬಿಟ್ಟುಕೊಟ್ಟು ಅನನ್ಯ ತ್ಯಾಗವನ್ನು ಮೆರೆದರು.

ಮಾಹಿತಿ ಆಧಾರ: ಮೈಸೂರು ವಿಶ್ವಕೋಶ

ಲೇಖನ ಕೃಪೆ : ಕನ್ನಡ ಸಂಪದ ಫೇಸ್ ಬುಕ್ ನಲ್ಲಿ ಪೋಸ್ಟ್ ಆಗಿದೆ.

■



ದಾಕ್ಷಾಯಿಣಿ ವೇಲಾಯುಧನ್:

ಸಂವಿಧಾನ ರಚನಾ ಸಮಿತಿಯ ಮಹಿಳಾ ಸದಸ್ಯೆ

(ಮಾರ್ಚ್ 8 , ಅಂತರ ರಾಷ್ಟ್ರೀಯ ಮಹಿಳಾ ದಿನ . ಈ ಸಂದರ್ಭಕ್ಕೆ ಸಂವಿಧಾನ ರಚನಾ ಸಮಿತಿಯ ಏಕೈಕ ತಳ ಸಮುದಾಯದ ಮಹಿಳಾ ಸದಸ್ಯೆ ದಾಕ್ಷಾಯಿಣಿ ವೇಲಾಯುಧನ್ ಅವರ ಪರಿಚಯ ಲೇಖನ)

" ಮಹಾತ್ಮ ಗಾಂಧಿ ಮಾಡಿದ ಕೆಲಸಗಳಿಂದಾಗಿಯೇ ಇಂದು ಜನರಲ್ಲಿ ಪರಿವರ್ತನೆ ಬಂದಿದೆ" ಹೀಗೆ ಹೇಳಿದವರು ಸಂವಿಧಾನ ರಚನಾ ಸಮಿತಿಯ ಏಕೈಕ ನಿಮ್ನ ವರ್ಗದ ಮಹಿಳಾ ಸದಸ್ಯರಾಗಿದ್ದ ದಾಕ್ಷಾಯಣಿ ವೇಲಾಯುಧನ್.

ನಮ್ಮ ಸಂವಿಧಾನ ರೂಪುಗೊಂಡಿದ್ದು ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಕ್ಷತೆಯ ಸಂವಿಧಾನ ಕರಡು ರಚನಾ ಸಮಿತಿಯ ಶ್ರಮ ಮತ್ತು ಸಂವಿಧಾನ ರಚನಾ ಸಭೆ ನಡೆಸಿದ ವಿಸ್ತೃತವಾದ ಚರ್ಚೆಗಳ ಮೂಲಕ ಎಂಬುದನ್ನು ಹೊಸದಾಗಿ ಹೇಳಬೇಕಿಲ್ಲ. ಆದರೆ ಸಂವಿಧಾನ ರಚನಾ ಸಭೆಯಲ್ಲಿ ಮಹಿಳೆಯರೂ ಇದ್ದರು ಎಂಬುದನ್ನು ಕೊಂಚ ಮಟ್ಟಿಗೆ ಒತ್ತಿ ಹೇಳಬೇಕಾಗುತ್ತದೆ. ಅದರಲ್ಲೂ ಮುಖ್ಯವಾಗಿ, ಈ ಸಭೆಯಲ್ಲಿ ದಕ್ಷಿಣ ಭಾರತದ ದಲಿತ ಮಹಿಳೆಯೊಬ್ಬರು ಇದ್ದರು. ನಾವು ಇವತ್ತು ಅನುಭವಿಸುತ್ತಿರುವ ಸ್ವಾತಂತ್ರ್ಯದ ಹಿಂದೆ ಅವರ ಜೀವನಾನುಭವ ಮತ್ತು ಆಲೋಚನೆಗಳು ಕೆಲಸ ಮಾಡಿವೆ ಎಂಬ ಮಾತನ್ನು ಗಟ್ಟಿ ದನಿಯಲ್ಲಿ ಹೇಳಬೇಕಾಗುತ್ತದೆ. ಅಂದಹಾಗೆ, ಇಲ್ಲಿ ಮಾತನಾಡುತ್ತಿರುವುದು ಕೇರಳದ ಎರ್ನಾಕುಳಂ ಜಿಲ್ಲೆಯ ಮುಳವುಕಾಡ್ ಊರಿನ ದಾಕ್ಷಾಯಣಿ ವೇಲಾಯುಧನ್ ಅವರ ಬಗ್ಗೆ. ಇವರು ಸಂವಿಧಾನ ರಚನಾ ಸಭೆಯ ಏಕೈಕ ದಲಿತ ಮಹಿಳೆ.

ಇವರು ಜನಿಸಿದ್ದು 1912ರ ಜುಲೈ ತಿಂಗಳಲ್ಲಿ. ದಲಿತ ನಾಯಕ ಆರ್. ವೇಲಾಯುಧನ್ ಅವರನ್ನು ವಿವಾಹವಾದ ನಂತರ ಇವರ ಹೆಸರು ದಾಕ್ಷಾಯಣಿ ವೇಲಾಯುಧನ್ ಎಂದಾಯಿತು. ಇವರ ವಿವಾಹ ಕಾರ್ಯಕ್ರಮ ಕೂಡ ವಿಭಿನ್ನವಾಗಿ ನಡೆಯಿತು. ಮಹಾತ್ಮ ಗಾಂಧಿ ಮತ್ತು ಕಸ್ತೂರಬಾ ಸಮ್ಮುಖದಲ್ಲಿ ಗುಜರಾತಿನ ವಾರ್ಧಾ ಆಶ್ರಮದಲ್ಲಿ, ಕುಷ್ಠರೋಗಿಯೊಬ್ಬರನ್ನು ಪುರೋಹಿತರ ಸ್ಥಾನದಲ್ಲಿ ಕೂರಿಸಿ ದಾಕ್ಷಾಯಣಿ ವೇಲಾಯುಧನ್ ವಿವಾಹವಾದರು. ದೇಶದ ರಾಷ್ಟ್ರಪತಿಯಾಗಿದ್ದ ಕೆ.ಆರ್. ನಾರಾಯಣನ್ ಅವರು ದಾಕ್ಷಾಯಣಿ ಅವರಿಗೆ ಸಂಬಂಧಿಕರೂ ಹೌದು.

ದಾಕ್ಷಾಯಣಿ ಅವರ ಬದುಕಿನ ಪುಟಗಳನ್ನು ತಿರುವಿ ಹಾಕುವ ಜೊತೆಯಲ್ಲೇ ಸಂವಿಧಾನ ರಚನಾ ಸಭೆಯಲ್ಲಿ ಅವರು ಅಸ್ಪೃಶ್ಯತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಆಡಿದ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಮಾತುಗಳು ಅಸ್ಪೃಶ್ಯತೆಯನ್ನು ದಾಕ್ಷಾಯಣಿ ಅವರು ಗ್ರಹಿಸಿದ ಬಗೆಯನ್ನು ಹೇಳುತ್ತವೆ. ಮಹಾತ್ಮ ಗಾಂಧೀಜಿ ಬಗ್ಗೆ ಅವರಿಗಿದ್ದ ಪ್ರೀತಿಯನ್ನು ತೋರಿಸುತ್ತವೆ. ಭಾರತದ ಮೇಲ್ಜಾತಿಗಳ ಜನ ಖಂಡಿತ ಬದಲಾಗುತ್ತಾರೆ ಎಂದು ಅವರು ಹೊಂದಿದ್ದ ವಿಶ್ವಾಸವನ್ನು ಧ್ವನಿಸುತ್ತವೆ. 'ಎಲ್ಲ ಧಾರ್ಮಿಕ ಮುಖಂಡರೂ ಅಸ್ಪೃಶ್ಯತೆಗೆ ವಿರುದ್ಧವಾಗಿದ್ದರು' ಎಂದು ದಾಕ್ಷಾಯಣಿ ಹೇಳಿದ್ದರು. ಅಸ್ಪೃಶ್ಯತೆ ವಿಚಾರವಾಗಿ ಇನ್ನೂ ಒಂದು ಮಾತು ಹೇಳಿದ್ದರು: 'ಮೇಲ್ಜಾತಿ ಹಿಂದೂಗಳು ಅಸ್ಪೃಶ್ಯತೆ ಎಂಬ ಪದವನ್ನು ಇಷ್ಟಪಡುತ್ತಿಲ್ಲದಿರುವುದು ನಮಗೆ ಕಾಣುತ್ತಿದೆ. ಅಸ್ಪೃಶ್ಯತೆ ಆಚರಿಸಿದ್ದಕ್ಕೆ ಬೈಗುಳ ತಿನ್ನಲು ಅವರು ಸಿದ್ಧರಿಲ್ಲ. ಏಕೆಂದರೆ, ಈ ಆಚರಣೆಗೆ ತಾವು ಕಾರಣರು, ಇದನ್ನು ನಮ್ಮ ನೆಲದಿಂದ ನಿರ್ಮೂಲಗೊಳಿಸಬೇಕು ಎಂಬ ತೀರ್ಮಾನವನ್ನು ಅವರು ಕೈಗೊಂಡಿದ್ದಾರೆ.' ದೇಶದ ಸಾಮಾಜಿಕ ವ್ಯವಸ್ಥೆಯ ಮೇಲಿನ ಅಪಾರ ನಂಬಿಕೆ ಈ ಮಾತುಗಳಲ್ಲಿ ವ್ಯಕ್ತವಾದರೂ, ಆ ನಂಬಿಕೆ ಎಷ್ಟರಮಟ್ಟಿಗೆ ಸತ್ಯವಾಗಿದೆ ಎಂಬುದು ಇಂದು ಬರಿಗಣ್ಣಿಗೆ ಕಾಣುತ್ತಿದೆ. ಕೇರಳದ ಪುಲಯ ಸಮುದಾಯಕ್ಕೆ ಸೇರಿದ ಈ ಮಹಿಳೆ ದಿಟ್ಟೆ ಎಂಬುದನ್ನು ಅವರ



ಬದುಕು ಸ್ಪಷ್ಟವಾಗಿ ಹೇಳುತ್ತದೆ. ಅವರು ಆಡಿದ ಕೆಲವು ಮಾತುಗಳಲ್ಲಿಯೂ ಅದು ವ್ಯಕ್ತವಾಗಿದೆ. ಸಭೆಯ ಮುಂದೆ ಇರಿಸಿದ್ದ ಕರಡನ್ನು ಪರಿಶೀಲಿಸಿ ದಾಕ್ಷಾಯಣಿ ಅವರು: 'ಸಂವಿಧಾನ ರಚನಾ ಸಭೆಯು ಆರಂಭದ ದಿನದಿಂದಲೂ ಸಂವಿಧಾನ ರಚನೆಯ ಬದಲು ಬೇರೆ ಕೆಲಸಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸಿತು ಎಂಬ ಆತಂಕ ನನ್ನದು' ಎಂದು ಹೇಳಿದ್ದರು. ನೆಹರೂ, ಅಂಬೇಡ್ಕರ್ ಅವರಂತಹ ನಾಯಕರ ಎದುರು ಈ ಮಾತು ಹೇಳುವುದು ಸಾಮಾನ್ಯದ ಸಂಗತಿಯೇ?!

ಇಷ್ಟೇ ಅಲ್ಲ, ದಾಕ್ಷಾಯಣಿ ಅವರು ಸಭೆಯಲ್ಲಿ ಇನ್ನೂ ಕೆಲವು ಕಟು ಮಾತುಗಳನ್ನು ಆಡಿದ್ದರು. ಅವು ಹೀಗಿವೆ: 'ಮಹಾನ್ ನಾಯಕರು ದಿನಂಪ್ರತಿ ಮಾಡುವ ಭಾಷಣಗಳನ್ನು, ಅವುಗಳಲ್ಲಿನ ಆದರ್ಶಗಳು ಮತ್ತು ತತ್ವಗಳನ್ನು ನಾವು ಕೇಳುತ್ತಿದ್ದೇವೆ. ಆದರೆ ಸಂವಿಧಾನವು ಅವರ ತತ್ವಗಳು ಮತ್ತು ಆಲೋಚನೆಗಳಲ್ಲಿ ಬರಡಾಗಿದೆ. ನಮ್ಮಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆದಿರುವ ನಾಯಕರು ಇದ್ದಾರೆ. ಆದರೂ, ಇಂಥದ್ದೊಂದು ಕರಡನ್ನು ನಮ್ಮ ಮುಂದೆ ಇರಿಸಿರುವುದು ದುರಂತ. ನಮ್ಮ ಮುಂದೆ ಇರಿಸಿರುವ ಕರಡಿನ ಪ್ರತಿಯನ್ನು ಕರಡು ರಚನಾ ಸಮಿತಿಯವರೂ ಪೂರ್ತಿಯಾಗಿ ಓದಿದ್ದಾರೆ ಎಂದು ನನಗೆ ಅನಿಸುತ್ತಿಲ್ಲ.'



ಇಂತಹ ದಿಟ್ಟತನದ ಮಾತುಗಳನ್ನು ಆಡುವುದಕ್ಕೆ ಬೇಕಿರುವ ಧೈರ್ಯವನ್ನು ದಾಕ್ಷಾಯಣಿ ಅವರು ಎಳೆಯ ವಯಸ್ಸಿನಲ್ಲೇ ಸಂಪಾದಿಸಿಕೊಂಡಿದ್ದನ್ನು ಗುರುತಿಸಬಹುದು. ದಾಕ್ಷಾಯಣಿ ಅವರು ಕಾಲೇಜಿನಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಒಂದು ಪ್ರಸಂಗ ನಡೆಯಿತು. ಅಸ್ಪೃಶ್ಯತೆಯನ್ನು ನಿವಾರಿಸುವ ಉದ್ದೇಶದಿಂದ ಆರಂಭಿಸಿದ ನಿಧಿಯೊಂದಕ್ಕೆ ಹಣ ನೀಡುವಂತೆ ದಾಕ್ಷಾಯಣಿ ಅವರಲ್ಲಿ ಸಹಪಾಠಿಯೊಬ್ಬರು ಮನವಿ ಮಾಡಿದರು. ಇದಕ್ಕೆ ದಾಕ್ಷಾಯಣಿ ನೀಡಿದ ಉತ್ತರ ಮಾರ್ಮಿಕವಾಗಿತ್ತು: 'ಅಸ್ಪೃಶ್ಯತೆಗೆ ನೀವೇ ಕಾರಣರು. ಹಾಗಾಗಿ ಅದನ್ನು ತೊಡೆಯಲು ಅಗತ್ಯವಿರುವ ಹಣವನ್ನು ನೀವೇ ಒಟ್ಟುಗೂಡಿಸಬೇಕು. ಹಣವನ್ನು ನೀವು ನನ್ನ ಬಳಿ ಕೇಳುವುದು ಸೂಕ್ತವಲ್ಲ' ಎಂದಿದ್ದರು.

ಇಷ್ಟೇ ಅಲ್ಲ, ದಾಕ್ಷಾಯಣಿ ಅವರು ಎಳೆಯ ವಯಸ್ಸಿನಲ್ಲಿ ಇದ್ದಾಗಿನಿಂದಲೂ ಅಸ್ಪೃಶ್ಯತೆ ಎಂಬ ಪದವೇ ಅವರಲ್ಲಿ ಬಂಡಾಯದ ಮನೋಭಾವವನ್ನು ಉದ್ದೀಪಿಸುತ್ತಿತ್ತು. 'ಶಾಲೆಯಂತಹ ಸಾರ್ವಜನಿಕ ಸ್ಥಳಗಳಲ್ಲಿ ಕೂಡ ಚಹಾ ಕೂಟದಂತಹ ಕಾರ್ಯಕ್ರಮಗಳ ವೇಳೆ ಅಸ್ಪೃಶ್ಯತೆ ಆಚರಿಸಲಾಗುತ್ತಿತ್ತು. ಅಂತಹ ಕಾರ್ಯಕ್ರಮಗಳಿಗೆ ನಾನು ಸಹಕಾರವನ್ನೇ ನೀಡುತ್ತಿರಲಿಲ್ಲ' ಎಂದು ದಾಕ್ಷಾಯಣಿ ಹೇಳಿಕೊಂಡಿದ್ದಾರೆ. 'ಮಹಾತ್ಮ ಗಾಂಧಿ ಮಾಡಿದ ಕೆಲಸಗಳಿಂದಾಗಿಯೇ ಇಂದು ಜನರಲ್ಲಿ ಪರಿವರ್ತನೆ ಬಂದಿದೆ' ಎಂದು ಸಂವಿಧಾನ ರಚನಾ ಸಮಿತಿ ಸಭೆಯಲ್ಲಿ ಅವರು ಹೇಳಿದ್ದರು.

ಜಾತೀಯತೆ ಹಾಗೂ ಅಸ್ಪೃಶ್ಯತೆಯನ್ನು ಕಂಡು, ಅನುಭವಿಸಿದ್ದರೂ, ಅದನ್ನು ಆಚರಿಸುವವರ ಬಗ್ಗೆ ದಾಕ್ಷಾಯಣಿ ಅವರಲ್ಲಿ ದ್ವೇಷ ಇತ್ತೇ? ಈ ಪ್ರಶ್ನೆಯನ್ನು ಇಟ್ಟುಕೊಂಡು ಉತ್ತರ ಹುಡುಕಿದರೆ, ಅಸ್ಪೃಶ್ಯತೆ ಬಗ್ಗೆ ಅವರಲ್ಲಿನ ಧೋರಣೆ ಏನಿತ್ತು ಎಂಬುದರ ಚಿತ್ರಣ ಕಣ್ಣು ಮುಂದೆ ಮೂಡುತ್ತದೆ. 'ಈ ಸಂವಿಧಾನ ಜಾರಿಗೆ ಬಂದ ನಂತರ ನಾವು ಬಯಸುವುದು, ಅಸ್ಪೃಶ್ಯತೆಯನ್ನು ನಿವಾರಿಸುವ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡ ಜನರನ್ನು ಶಿಕ್ಷಿಸುವುದಲ್ಲ. ಅಸ್ಪೃಶ್ಯತೆಯ ನಿವಾರಣೆಯ ನಿಟ್ಟಿನಲ್ಲಿ ಸರ್ಕಾರಗಳು ಸೂಕ್ತ ಅಭಿಯಾನ ಹಮ್ಮಿಕೊಳ್ಳಬೇಕು. ಆಗ ಮಾತ್ರ ನಾವು ಬಯಸುವ ಸುಧಾರಣೆಗಳು ಸಾಧ್ಯವಾಗುತ್ತವೆ' ಎಂದು ಅವರು ಪ್ರತಿಪಾದಿಸಿದ್ದರು.

'ಕಾಲ ಸರಿದಂತೆ, ಅಸ್ಪೃಶ್ಯರು ಎಂಬ ಸಮುದಾಯ ಇರುವುದಿಲ್ಲ ಎನ್ನುವುದು ನನ್ನ ಆಶಯ. ಅಂತರರಾಷ್ಟ್ರೀಯ ವೇದಿಕೆಯಲ್ಲಿ ನಮ್ಮ ಪ್ರತಿನಿಧಿಗಳ ಬಳಿ ಯಾರಾದರೂ ಅಸ್ಪೃಶ್ಯತೆಯ ಬಗ್ಗೆ ಪ್ರಶ್ನಿಸಿದಾಗ ಅವರು ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಅನಿವಾರ್ಯತೆಯೂ ಇರುವುದಿಲ್ಲ' ಎಂದೂ ಅವರು ಸಂವಿಧಾನ ರಚನಾ ಸಭೆಯಲ್ಲಿ ಹೇಳಿದ್ದರು.

(ಮಾರ್ಚ್ 7, 2018 ರ ಪ್ರಜಾವಾಣಿಯ ನಾರಿಪಥ ಲೇಖನದ ಆಯ್ದ ಭಾಗ)

■



ಗಾಂಧಿ ಸಾಹಿತ್ಯ ಡಿಜಟಲೀಕರಣ ...

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯು ಗಾಂಧಿ ಸಾಹಿತ್ಯವನ್ನು ಡಿಜಿಟಲೀಕರಣ ಮಾಡಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ಮಹಾ ಉದ್ದೇಶವನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆ ಪ್ರಕಟಪಡಿಸಿರುವ ಗಾಂಧಿ ಸಾಹಿತ್ಯ ಕೃತಿಗಳನ್ನು ಡಿಜಿಟಲೀಕರಿಸಿ ಗಾಂಧಿ ಸಂಚಯ ಎನ್ನುವ ಹೆಸರಿನ ಅಡಿಯಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದೆ. ಹಾಗೆಯೇ ಗಾಂಧಿ ಭವನ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಡಿಜಿಟಲೀಕರಿಸಿ ಅವುಗಳನ್ನು ' ಗಾಂಧಿ ಭವನ್ ಕಲೆಕ್ಷನ್ಸ್ ' ಅಡಿಯಲ್ಲಿ ಸಂಗ್ರಹಿಸಿ ಇಡಲಾಗಿದೆ.

ಈ ಡಿಜಿಟಲೀಕರಣದ ಮುಂದುವರಿದ ಭಾಗವಾಗಿ ದಕ್ಷಿಣ ಭಾರತ ರಾಜ್ಯಗಳ ಗಾಂಧಿ ಸ್ಮಾರಕ ನಿಧಿಗಳಲ್ಲಿ ಇರುವ ಆಯಾ ಸ್ಥಳೀಯ ಭಾಷೆಗಳ ಪುಸ್ತಕಗಳನ್ನು ಡಿಜಟಲೀಕರಿಸಿ ಸಾರ್ವಜನಿಕ ವೀಕ್ಷಣೆಗೆ ನೀಡುವ ಉದ್ದೇಶದಿಂದ ಅವರುಗಳ ಸಭೆಯನ್ನು ಫೆಬ್ರವರಿ 15 , 2024 ರಂದು ಬೆಂಗಳೂರಿನಲ್ಲಿ ಕರೆಯಲಾಗಿತ್ತು. ತಮಿಳುನಾಡು , ತೆಲಂಗಾಣ ಗಾಂಧಿ ಸ್ಮಾರಕ ನಿಧಿ ಸಂಸ್ಥೆಗಳು ಮತ್ತು ಮದುರೈ ಗಾಂಧಿ ಮ್ಯೂಸಿಯಂ ನವರು ಈ ಸಭೆಗೆ ಆಗಮಿಸಿ ಗಾಂಧಿ ಭವನದ ಡಿಜಟಲೀಕರಣ ಚಟುವಟಿಕೆಗಳನ್ನು ವೀಕ್ಷಿಸಿದರು. ಈ ಸಭೆಯ ನಂತರ ತಮ್ಮ ಗಾಂಧಿ ಸ್ಮಾರಕ ನಿಧಿಗಳಲ್ಲಿ ಇರುವ ಗಾಂಧಿ ಸಾಹಿತ್ಯವನ್ನು ಡಿಜಟಲೀಕರಿಸಲು ತಾತ್ವಿಕವಾಗಿ ಒಪ್ಪಿ ಅಮೇರಿಕಾದ ಪಬ್ಲಿಕ್ ರಿಸೋರ್ಸ್ ಸಂಸ್ಥೆಯ ಜೊತೆ ಮೆಮೊರೆಂಡಮ್ ಆಫ್ ಕೋ ಆಪರೇಷನ್ ಪತ್ರಕ್ಕೆ ಸಹಿ ಮಾಡಲು ಸಿದ್ಧರಿರುತ್ತಾರೆ.


ಪಬ್ಲಿಕ್ ರಿಸೋರ್ಸ್ ಸಂಸ್ಥೆಯ ಪ್ರವರ್ತಕರಾದ ಕಾರ್ಲ್ ಮಲಮಡ್ ಅವರು ಸಾರ್ವಜನಿಕರಿಗೆ ಉತ್ತಮ ಮಾಹಿತಿಗಳು ಸುಲಭವಾಗಿ ಉಚಿತವಾಗಿ ಲಭ್ಯವಾಗಬೇಕು ಎಂದು ತಾವು ನಡೆಸುತ್ತಿರುವ ಡಿಜಟಲೀಕರಣ ಕಾರ್ಯದ ಬಗ್ಗೆ ಸಭೆಯಲ್ಲಿ ವಿವರವಾಗಿ ತಿಳಿಸಿದರು . ಕಾರ್ಲ್ ಮಲಮಡ್ ಅವರ ಜೊತೆ ಉಚಿತ ಡಿಜಟಲೀಕರಣ ಕಾರ್ಯದಲ್ಲಿ ಪೂರ್ಣವಾಗಿ ಸಹಕರಿಸುತ್ತಿರುವ ಸರ್ವೆಂಟ್ಸ್ ಆಫ್ ನಾಲೆಡ್ಜ್ ನ ಓಂಶಿವಪ್ರಕಾಶ್ ಅವರು ತಮಿಳು ತೆಲಗು ಮತ್ತು ಮಲೆಯಾಳಿ ಗಾಂಧಿ ಸಾಹಿತ್ಯ ಪುಸ್ತಕಗಳನ್ನು ಬೆಂಗಳೂರಿನ ಗಾಂಧಿ ಭವನಕ್ಕೆ ತಂದು ಕೊಟ್ಟರೆ ಅವುಗಳನ್ನು ಉಚಿತವಾಗಿ ಡಿಜಟಲೀಕರಿಸಿ ಕೊಡಲಾಗುವುದು ಎಂದು ಸಭೆಗೆ ಸವಿವರವಾಗಿ ತಿಳಿಸಿದರು.



ಸಭೆಯಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ ಕೃಷ್ಣ , ಉಪಾಧ್ಯಕ್ಷ ಎನ್ ಆರ್ ವಿಶುಕುಮಾರ್ , ಗೌರವ ಕಾರ್ಯದರ್ಶಿ ಎಂ ಸಿ ನರೇಂದ್ರ , ತೆಲಂಗಾಣ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಸುಬ್ಬರಾವ್ , ತಮಿಳು ನಾಡು ಗಾಂಧಿ ಸ್ಮಾರಕ ನಿಧಿಯ ಮೋಹನ್ , ಮದುರೈ ಗಾಂಧಿ ಮ್ಯೂಸಿಯಂ ನ ಸೆಂಥಿಲ್ ಕುಮಾರ್ ಭಾಗವಹಿಸಿದ್ದರು.

ಆರಂಭಿಕವಾಗಿ ತಮಿಳುನಾಡು ಮತ್ತು ತೆಲಂಗಾಣ ಮತ್ತು ಮದುರೈ ಗಾಂಧಿ ಮ್ಯೂಸಿಯಂ ನವರು ತಂದಿದ್ದ ಪುಸ್ತಕಗಳನ್ನು ಅವರ ಸಮ್ಮುಖದಲ್ಲೇ ಡಿಜಟಲೀಕರಿಸಿ ಸಾರ್ವಜನಿಕ ಜಾಲ ತಾಣವಾದ ಇಂಟರ್ನೆಟ್ ಆರ್ಕಿವ್ ನಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ. ■





ಮಹಾದೇವ ಹರೀಭಾಯಿ ದೇಸಾಯಿ :

ಗಾಂಧಿ ಆತ್ಮಕತೆಯ ಪರಿಚಾರಕ



ಮಹಾತ್ಮ ಗಾಂಧೀಜಿಯವರ ಆತ್ಮ ಚರಿತ್ರೆಯನ್ನು ವಿಶ್ವದೆಲ್ಲೆಡೆಯ ಓದುಗರಿಗೆ ಲಭ್ಯವಾಗುವಂತೆ ಮಾಡಿದ ಮಹಾನ್ ವ್ಯಕ್ತಿ ಮಹಾದೇವ ಹರೀಭಾಯಿ ದೇಸಾಯಿ. ಅವರು ಮಹಾತ್ಮರ ನೆರಳಿನಂತೆ, ಅವರ ಆಪ್ತ ಕಾರ್ಯದರ್ಶಿಯಾಗಿ, ಗಾಂಧಿವಿಚಾರದ ವ್ಯಾಖ್ಯಾನಕಾರರಾಗಿ, ಸಾತ್ವಿಕ ಶಕ್ತಿಯ ಪ್ರತೀಕರಾಗಿ, ಸೆರೆಮನೆಯಲ್ಲೇ ಪ್ರಾಣಬಿಟ್ಟ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾಗಿ ವಿಶ್ವಮಾನ್ಯರು.

ಮಹಾದೇವ ದೇಸಾಯಿ ಗುಜರಾತಿನ ಸೂರತ್ ಜಿಲ್ಲೆಯ ಓಲ್ಪಾಡ್ ತಾಲ್ಲೂಕಿನ ಸರಾಸ್ ಗ್ರಾಮದಲ್ಲಿ 1892ರ ಜನವರಿ 1 ರಂದು ಜನಿಸಿದರು. ತಂದೆ ಹರಿಭಾಯಿ ಉಪಾಧ್ಯಾಯರಾಗಿದ್ದರು. ತಾಯಿ ಜಮುನಾ ಬಹೆನ್. ಮಹಾದೇವರಿಗೆ ಇನ್ನೂ 7 ವರ್ಷ ಆಗಿದ್ದಾಗ ತಾಯಿ ತೀರಿಕೊಂಡರು. ಮಹಾದೇವ ದೇಸಾಯಿಯವರಿಗೆ 13 ನೆಯ ವಯಸ್ಸಿನಲ್ಲಿ ದುರ್ಗಾ ಬಹೆನ್ರೊಂದಿಗೆ ಮದುವೆಯಾಯಿತು. ಇವರ ಏಕಮಾತ್ರ ಪುತ್ರ ನಾರಾಯಣ ದೇಸಾಯಿ ಸರ್ವೋದಯ ಕಾರ್ಯಕರ್ತರಾದರು.

1906ರಲ್ಲಿ ಉತ್ತಮ ಶ್ರೇಣಿಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದ ಮಹಾದೇವ ದೇಸಾಯಿಯವರು ವಿದ್ಯಾರ್ಥಿವೇತನ ಪಡೆದು 1907ರಲ್ಲಿ ಮುಂಬಯಿಯ ಎಲ್ಫಿನ್ಸ್ಟನ್ ಕಾಲೇಜು ಸೇರಿದರು. 1910ರಲ್ಲಿ ಪದವೀಧರರಾದರು. ಅನಂತರ ಅಲ್ಲಿಯ ನ್ಯಾಯಶಾಸ್ತ್ರ ಕಾಲೇಜನ್ನು ಸೇರಿ 1913ರಲ್ಲಿ ಎಲ್. ಎಲ್ ಬಿ ಪದವಿ ಪಡೆದರು. ವಿದ್ಯಾಭ್ಯಾಸ ಮುಗಿಸಿದ ಅನಂತರ ಸ್ವಲ್ಪ ದಿನಗಳಲ್ಲೇ ಇವರು ಲಾರ್ಡ್ ಮಾರ್ಲೆಯ 'ಆನ್ ಕಾಂಪ್ರೊಮೈಸ್' ಎಂಬ ಗ್ರಂಥವನ್ನು ಭಾಷಾಂತರ ಮಾಡಿ ಒಂದು ಸಾವಿರ ರೂಪಾಯಿಗಳ ಬಹುಮಾನ ಪಡೆದರು. ಇದು ಅನಂತರ 1925ರಲ್ಲಿ ಪ್ರಕಟಗೊಂಡಿತು.

ಮಹಾದೇವ ದೇಸಾಯಿ ಅವರು ಜೀವನೋಪಾಯಕ್ಕಾಗಿ

ವಕೀಲಿ ಆರಂಭಿಸಿದರು. ಆದರೆ ಅದರಲ್ಲಿ ಇವರಿಗೆ ಯಶಸ್ಸು ದೊರಕಲಿಲ್ಲ. ಹೀಗಾಗಿ ಗೆಳೆಯರೊಬ್ಬರ ಸಹಾಯದಿಂದ ಸಹಕಾರ ಬ್ಯಾಂಕೊಂದರಲ್ಲಿ ನೌಕರರಾಗಿ ಸೇರಿದರು. ಬ್ಯಾಂಕಿನಲ್ಲಿ ನಡೆಯುತ್ತಿದ್ದ ಅವ್ಯವಹಾರಗಳಿಂದ ಬೇಸರಗೊಂಡು ಆ ಕೆಲಸವನ್ನೂ 1917ರ ಆಗಸ್ಟ್ ಸಮಯದಲ್ಲಿ ಬಿಟ್ಟುಬಿಟ್ಟರು. ಗುಜರಾತಿ, ಇಂಗ್ಲಿಷ್, ಸಂಸ್ಕೃತ, ಬಂಗಾಳಿ, ಹಿಂದಿ ಮತ್ತು ಮರಾಠಿ ಭಾಷೆಗಳ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದ ಮಹಾದೇವ ದೇಸಾಯಿಯವರು ಅದೇ ಸಮಯಕ್ಕೆ ಗಾಂಧಿಯವರನ್ನು ಕಂಡರು. ಒಡನೆಯೇ ಇವರು ಮಹಾತ್ಮರ ಪ್ರಭಾವಕ್ಕೆ ಒಳಗಾಗಿ ಅವರ ಆಪ್ತಕಾರ್ಯದರ್ಶಿಯಾಗಿ ಸೇರಿ, ಇಪ್ಪತ್ತೈದು ವರ್ಷಗಳ ಕಾಲ ಗಾಂಧೀಜಿಯವರನ್ನು ನೆರಳಿನಂತೆ ಅನುಸರಿಸಿ ಆದರ್ಶ ರೀತಿಯಲ್ಲಿ ಕಾರ್ಯ ನಿರ್ವಹಿಸಿದರು.

ಚಂಪಾರಣ್ ಸತ್ಯಾಗ್ರಹದಲ್ಲಿ ಭಾಗವಹಿಸಿದ ಅನಂತರ ಗಾಂಧೀಜಿಯವರೊಂದಿಗೆ ಸಾಬರಮತಿ ಆಶ್ರಮದಲ್ಲೇ ನೆಲೆಸಿದ ಮಹಾದೇವ ದೇಸಾಯಿಯವರು ಯಂಗ್ ಇಂಡಿಯ ಮತ್ತು ನವಜೀವನ ಪತ್ರಿಕೆಗಳ ಸಂಪಾದನೆಯ ಕಾರ್ಯದಲ್ಲಿ ಗಾಂಧೀಜಿಯವರಿಗೆ ನಿರಂತರ ನೆರವು ನೀಡಿದರು. ಗಾಂಧಿಯವರು ಸೆರೆಮನೆಯಲ್ಲಿದ್ದಾಗ ಮಹಾದೇವರೇ ಈ ಪತ್ರಿಕೆಗಳ ಮೂಲಕ ಪ್ರಕಾಶಪಡಿಸಿದ ಲೇಖನಗಳು ಸ್ವಾತಂತ್ರ್ಯ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಿದವು. ಗಾಂಧೀಜಿಯವರ ಇಚ್ಛೆಯ ಮೇರೆಗೆ ಇವರು ಅಲಹಾಬಾದಿಗೆ ಹೋಗಿ ಮೋತಿಲಾಲ್ ನೆಹರೂ ಅವರ ಇಂಡಿಪೆಂಡೆಂಟ್ ಪತ್ರಿಕೆಯ ಸಂಪಾದಕರಾಗಿದ್ದರು. ಆದರೆ ಸ್ವಲ್ಪ ಕಾಲದಲ್ಲಿಯೇ ಸರ್ಕಾರ ದೇಸಾಯಿಯವರನ್ನೂ ಬಂಧಿಸಿದ್ದರಿಂದ ಆ ಕೆಲಸವನ್ನು ಮುಂದುವರಿಸಲಾಗಲಿಲ್ಲ. ಬಿಡುಗಡೆಯಾದ ಅನಂತರ ಸಾಬರಮತಿ ಆಶ್ರಮಕ್ಕೆ ಹಿಂತಿರುಗಿ ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿ ತಮ್ಮ ಕಾರ್ಯವನ್ನು ಮುಂದುವರಿಸಿದರು. ಬರ್ಡೋಲಿ ಮತ್ತು ಉಪ್ಪಿನ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಮತ್ತೆ ಸೆರೆಮನೆವಾಸ ಅನುಭವಿಸಿದರು.

ಮಹಾದೇವ ದೇಸಾಯಿ ಅವರು ಮಹಾತ್ಮ ಗಾಂಧಿಯವರ ಜೊತೆಯಲ್ಲಿ ಭಾರತದ ಎಲ್ಲ ಪ್ರಾಂತ್ಯಗಳಲ್ಲೂ ಹಲವಾರು ಬಾರಿ ಪ್ರವಾಸ ಮಾಡಿದರು. 1931ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿಗೆ ಗಾಂಧಿಯವರು ಹೋಗಿದ್ದಾಗ ಮಹಾದೇವ ದೇಸಾಯಿಯವರೂ ಅವರೊಂದಿಗೆ ಹೋಗಿದ್ದರು.

ಸರ್ಕಾರ 1942 ರ ಆಗಸ್ಟ್ 9 ರಂದು ಮುಂಜಾನೆ ಗಾಂಧಿಯವರೊಡನೆ ಮಹಾದೇವ ದೇಸಾಯಿಯವರನ್ನೂ ಬಂಧಿಸಿ ಪುಣೆಯ ಆಗಾಖಾನ್ ಅರಮನೆಗೆ ರವಾನಿಸಿತು. ಒಂದು ವಾರದಲ್ಲಿಯೇ, 1942ರ ಆಗಸ್ಟ್ 15 ರಂದು ಮಹಾದೇವ ದೇಸಾಯಿಯವರು ಹೃದಯಾಘಾತದಿಂದ ಮರಣ ಹೊಂದಿದರು. ಸ್ವಯಂ ಮಹಾತ್ಮ ಗಾಂಧಿಯವರೇ ಮಹಾದೇವರ ಚಿತೆಗೆ ಅಗ್ನಿಸ್ಪರ್ಶ ಮಾಡಿ ಅಂತ್ಯಕ್ರಿಯೆಗಳನ್ನು ನಡೆಸಿದರು. ಗಾಂಧಿಯವರು ಆಗಾಖಾನ್ ಸೆರೆಮನೆಯಲ್ಲಿದ್ದ ಎರಡು ವರ್ಷಗಳಲ್ಲಿ ಪ್ರತಿದಿನವೂ ಮಹಾದೇವ ದೇಸಾಯಿಯವರ ಸಮಾಧಿಯ ಬಳಿಗೆ ಹೋಗಿ ಅದಕ್ಕೆ ಪುಷ್ಪಗಳನ್ನು ಅರ್ಪಿಸಿ ಬರುತ್ತಿದ್ದರು. ಮಹಾದೇವರು ಯೋಗಿಯಂತೆ ಸತ್ತಿದ್ದಾರೆ. ಅವರದು ದೇಶಭಕ್ತನ ಸಾವು, ಎಂಬುದಾಗಿ ಗಾಂಧಿಯವರು ಮಹಾದೇವ ದೇಸಾಯಿಯವರ ಬಗ್ಗೆ ಬರೆದರು. ಇವರ ಅಸಾಮಾನ್ಯ ಬದುಕಿನ ರೀತಿಗೆ ಗಾಂಧಿಯವರು ಮಾರುಹೋಗಿದ್ದರು. ಆವಶ್ಯಕತೆ ಒದಗಿದಾಗ ತಮ್ಮನ್ನು ತಾವೇ ಮರೆತು ಕರಗಿ ಹೋಗುವ ಶಕ್ತಿಯೇ ಮಹಾದೇವರ ಶ್ರೇಷ್ಠ ಗುಣವೆಂದೂ ಮಹಾದೇವ್ ಸಂಪೂರ್ಣವಾಗಿ ತಮ್ಮಲ್ಲಿ ಲೀನವಾಗಿದ್ದರೆಂದೂ ತಮ್ಮನ್ನು ಬಿಟ್ಟು ಅವರಿಗೆ ಬೇರೆ ಅಸ್ತಿತ್ವವೇ ಇರಲಿಲ್ಲವೆಂದೂ ಗಾಂಧಿಯವರು ಹೃದಯಾಂತರಾಳದಿಂದ ನುಡಿಯುತ್ತಿದ್ದರು.

ಮಹಾದೇವ ದೇಸಾಯಿ ಅವರು ಯಂಗ್ ಇಂಡಿಯ, ನವಜೀವನ ಮತ್ತು ಹರಿಜನ ಪತ್ರಿಕೆಗಳಲ್ಲಿ ಬರೆದಿರುವ ಲೇಖನಗಳು ಹಾಗೂ ಇತರ ಗ್ರಂಥಗಳು ಗಾಂಧೀವಿಚಾರದ ಅಧಿಕೃತ ವ್ಯಾಖ್ಯಾನಗಳಂತಿವೆ. ಗಾಂಧಿಯವರೊಂದಿಗೆ ಇದ್ದಾಗ ಬರೆದಿಟ್ಟಿದ್ದ ದಿನಚರಿ ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿವೆ. ವಿತ್ ಗಾಂಧಿ ಇನ್ ಸಿಲೋನ್ (1928), ದಿ



ಸ್ಟೋರಿ ಆಫ್ ಬರ್ಡೋಲಿ, ಸ್ವದೇಶಿ – ಟ್ರೂ ಅಂಡ್ ಫಾಲ್ಸ್, ಅನ್ವರ್ದಿ ಆಫ್ ವರ್ಧಾ (1929), ಎಕ್ಲಿಪ್ಸ್ ಆಫ್ ಫೇತ್, ದಿ ನೇಷನ್ಸ್ ವಾಯ್ಸ್ (1932), ದಿ ಎಪಿಕ್ ಆಫ್ ಟ್ರಾವಂಕೂರ್ (1937), ಗೀತಾ ಅಕಾರ್ಡಿಂಗ್ ಟು ಗಾಂಧಿ– ಇವು ಮಹಾದೇವ ದೇಸಾಯಿಯವರ ಇತರ ಕೆಲವು ಗ್ರಂಥಗಳು.

ಗುಜರಾತಿಯಲ್ಲಿರುವ ಮುಖ್ಯ ಗ್ರಂಥಗಳು ವೀರ ವಲ್ಲಭ ಭಾಯ್, ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಜೀವನ ಚರಿತ್ರೆ ಖುದಾಯ್ ಖಿದ್ಮತ್ಗಾರ್, ಏಕ್ ಧರ್ಮಯುದ್ಧ್ ಮತ್ತು ಸಂತ ಫ್ರಾನ್ಸಿಸ್ ಗ್ಸೇವಿಯರ್. ಇಷ್ಟೇ ಅಲ್ಲದೆ ಇವರು ಬಂಗಾಳಿಯಿಂದ ರವೀಂದ್ರನಾಥ ಠಾಕೂರರ ಪ್ರಾಚೀನ ಸಾಹಿತ್ಯ ಮತ್ತು ಚಿತ್ರಾಂಗದ ಕೃತಿಗಳನ್ನು ಗುಜರಾತಿಗೆ ಭಾಷಾಂತರ ಮಾಡಿದ್ದಾರೆ. ಇದಲ್ಲದೆ ನೆಹರೂ ಅವರ ಆತ್ಮಚರಿತ್ರೆಯನ್ನು ಇಂಗ್ಲಿಷಿನಿಂದ ಗುಜರಾಥಿ ಭಾಷೆಗೆ ತಂದರು. ಮಹಾತ್ಮರ ಜೀವನ ಚರಿತ್ರೆಯನ್ನು ಇಂಗ್ಲಿಷಿಗೆ ತಂದ 'The story of my experiments with Truth' ಕೃತಿಯಂತೂ ಸಮಸ್ತ ವಿಶ್ವಕ್ಕೆ ಮಹಾತ್ಮರನ್ನು ತೆರೆದುಡುವಲ್ಲಿ ಮೂಡಿದ ಅದ್ಭುತ ಕಾರ್ಯ.

ಅಹಮದಾಬಾದಿನ ಗುಜರಾತ್ ವಿದ್ಯಾಪೀಠದಲ್ಲಿ ಮಹಾದೇವ ದೇಸಾಯಿ ಸಮಾಜ ಮಹಾವಿದ್ಯಾಲಯ ಎಂಬ ಸಂಸ್ಥೆಯಿದೆ. ಮಹಾತ್ಮರ ಸ್ಮರಣೆಯೊಂದಿಗೆ ಮಹಾದೇವ ದೇಸಾಯಿ ಸ್ಮರಣೆ ಆ ಮಹಾದೇವನಿಗೂ ಪ್ರಿಯವಾಗಿದ್ದಿರಲೇಬೇಕು.


ಲೇಖನ ಕೃಪೆ : ಕನ್ನಡ ಸಂಪದ

■

ಗಾಂಧಿ ಮತ್ತು ಕರ್ನಾಟಕ

ಭಾಗ – 10

ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.



ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲಿ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ಧವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

ಆವತ್ತಿಗೆ ಮೂರನೆಯ ದಿನ ಎಂದರೆ, 25-12-24ರಲ್ಲಿ ಗಾಂಧೀಜಿಯ ಹೇಳಿಕೆಯೊಂದು ಬಂತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವೆಚ್ಚ ಬಹಳ ಶ್ರೀಮಂತಿಕೆಯದು; ಅಲಂಕಾರಕ್ಕೆ ವಸತಿಗೆ ಹೆಚ್ಚು ಹಣ ವೆಚ್ಚವಾಗುತ್ತದೆ. ಈಗಿರುವ ಹತ್ತು ರೂಪಾಯಿ ಪ್ರತಿನಿಧಿಗಳ ಶುಲ್ಕ ಬಹಳ ಹೆಚ್ಚು ಎಂದು ಅದರಲ್ಲಿ ಇತ್ತು. ತಮ್ಮ ಗುಡಿಸಲು ಕೂಡಾ ಬಹಳ ಹಣ ತಿಂದಿದೆ. ತಾವು ವಸತಿ ಸಮಿತಿಯ ಸದಸ್ಯರಾಗಿದ್ದರೆ ಆ "ವೆಚ್ಚವನ್ನೆಲ್ಲ

ತಗ್ಗಿಸಬಹುದಾಗಿತ್ತು. ಎಂದರು. ಪ್ರತಿನಿಧಿಗಳ ಶುಲ್ಕ ಹತ್ತುರೂಪಾಯಿ ಬೇಡ ಒಂದು ರೂಪಾಯಿ ಸಾಕು ಎಂದರು. ಎಷ್ಟೋ ಜನ ನೂರಾರು ರೂಪಾಯಿ ವೆಚ್ಚಮಾಡಿ ಕಾಂಗ್ರೆಸಿಗೆ ಬಂದಿದ್ದಾರೆ ಎಂದು ಹೇಳಿದರು. ವಿಷಯ ನಿಯಾಮಕ ಸಮಿತಿಯು ಪ್ರತಿನಿಧಿ ಶುಲ್ಕವನ್ನು ಒಂದು ರೂಪಾಯಿಗೆ ಇಳಿಸಿತು. ಮುಂದಿನ ಕಾಂಗ್ರೆಸಿನ ಅಧಿವೇಶನ, ಯಾವ ಪ್ರಾಂತದಲ್ಲಿ ಖಾದೀ ಕಾರ್ಯಕ್ರಮ, ಪರದೇಶಿ ವಸ್ತ್ರ ಬಹಿಷ್ಕಾರ, ಆ ಪ್ರಾಂತದ ಜನಸಂಖ್ಯೆಗೆ ಅನುಗುಣವಾಗಿ, ಹೆಚ್ಚು ಎಲ್ಲಿ ಆಗಿದೆಯೋ ಅಲ್ಲಿ ನಡೆಯಬೇಕು ಎಂದು ತೀರ್ಮಾನ ಆಯಿತು.

ವಿಷಯ ನಿಯಾಮಕ ಸಮಿತಿಯಲ್ಲಿ (25-12-24):

ನಾಳೆ ಮೂರುಗಂಟೆಗೆ ಸರಿಯಾಗಿ ನಾವು ಸೇರುತ್ತೇವೆ, ಒಂದೆರಡು ನಿಮಿಷ ಪ್ರಾರ್ಥನೆ. ಆಮೇಲೆ ಸ್ವಾಗತ ಭಾಷಣ. ಅದು 15 ನಿಮಿಷಕ್ಕೆ ಹೆಚ್ಚಾಗುವುದಿಲ್ಲ. ನಾನು ನನ್ನ ಭಾಷಣ ಓದುವುದಿಲ್ಲ. ಇವತ್ತು ಸಂಜೆಗೆ ಅದರ ಪ್ರತಿಗಳನ್ನು ಹಂಚುತ್ತಾರೆ. ಅದನ್ನು ಚೆನ್ನಾಗಿ ಓದಿ. ನಾನು ಕೆಲವು ಪ್ರಾರಂಭದ ಮಾತುಗಳನ್ನು ಹೇಳುತ್ತೇನೆ. ಹಿಂದೂಸ್ತಾನಿಯಲ್ಲಿ ಪ್ರಾರಂಭಿಸಿ ಇಂಗ್ಲೀಷಿನಲ್ಲಿ ಮುಗಿಸುತ್ತೇನೆ.

ನಾಳೆ ಮೊಟ್ಟಮೊದಲು ಬರುವ ಗೊತ್ತುವಳಿ ಕಲ್ಕತ್ತೆಯ ಒಪ್ಪಂದದ ಬಗ್ಗೆ ; ಅದನ್ನು ಮೌಲಾನಾ ಹಜರತ್ ಮೋಹಾನ ವಿರೋಧಿಸುತ್ತಾರೆ. ಈ ಸಂದರ್ಭದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಒಂದು ಅರ್ಥದಲ್ಲಿ ನೀವು ಪ್ರತಿನಿಧಿಗಳು, ಎಲ್ಲರೂ ಬಂದಿದ್ದಾರೆ. ಭಾರವನ್ನೆಲ್ಲ ನನ್ನ ತಲೆಯಮೇಲೆ ಹಾಕುವ ಹಾಗಿದ್ದರೆ ಈ ಗೊತ್ತುವಳಿಯನ್ನು ಒಪ್ಪಿಕೊಳ್ಳಬೇಡಿ ಎಂದು ಮರ್ಯಾದೆಯಿಂದ ಹೇಳುತ್ತೇನೆ. ನನ್ನ ಹೆಗಲು ಈ ಭಾರವನ್ನು ಹೊರಲಾರದು. ನಿಮ್ಮ ಸಹಾಯವಿದ್ದರೆ ಮಾತ್ರ ಹೊರಬಲ್ಲೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಇದಕ್ಕೆ ತತ್ವಶಃ ಅಕ್ಷರಶಃ ಪೂರ್ಣ ಮನಸಿನಿಂದ ನೆರವು ನೀಡಲು ಸಿದ್ಧರಾಗದಿದ್ದರೆ ನಮ್ಮ ಉದ್ದೇಶ ಫಲ ಆಗುವದಿಲ್ಲ. ಪರದೇಶೀ ವಸ್ತ್ರ ಬಹಿಷ್ಕಾರ ಮಾಡುವದೇ ನಮ್ಮ ಉದ್ದೇಶ. ಇದನ್ನು ಕಾರ್ಯಗತ ಮಾಡಲು ಕಡು ಬಡವರಾದ ಪುರುಷರು, ಹೆಂಗಸರೂ, ಮಕ್ಕಳೂ ಇವರೆಲ್ಲರ ಸಹಾಯದಿಂದ ಮಾತ್ರ ಸಾಧ್ಯ. ಇದು ಪ್ರಾಮಾಣಿಕ ಪ್ರಯತ್ನವಾಗಬೇಕು. ನನ್ನ ವಿನಮ್ರ ಅಭಿಪ್ರಾಯದಲ್ಲಿ ಇಡೀ ರಾಷ್ಟವೇ ಕೈಕೊಳ್ಳಲು ತಕ್ಕುದಾದ ಕಾರ್ಯಕ್ರಮ. ಇವತ್ತು ನಾವು ಮಾಡಬಹುದಾದುದು ಇಷ್ಟೇ.. ಮನಸ್ಸು ಮಾಡಿದರೆ ಇನ್ನೂ ಸಾವಿರ ಕಾರ್ಯಗಳನ್ನು ಮಾಡಬಹುದು ಎಂದು ನಮಗೆ ನಾವೇ ಮನಗಾಣುತ್ತೇವೆ, ಇದನ್ನು ಜಗತ್ತಿಗೂ ತಿಳಿಸಿ ಕೊಡುತ್ತೇವೆ.

ಇವತ್ತು ಬಂದ ತಿದ್ದುಪಡಿ ನನ್ನನ್ನು ಬಹಳ ನೋಯಿಸಿತು.ಭೋಪಟಕರರು ಅದನ್ನು ಮಂಡಿಸುತ್ತಾ, ಎಲ್ಲ ಸಂದರ್ಭದಲ್ಲಿಯೂ ನಮ್ಮಲ್ಲಿ ವಯಸ್ಕಾರದವರೇ ನೂಲದೇ ಇದ್ದರೆ. ಖಾದೀ ಧರಿಸದೇ ಇದ್ದರೆ, ಮಕ್ಕಳು ಹಾಗೆ ಮಾಡಿಯಾರು ಎಂದು ನಿರೀಕ್ಷಿಸಬಾರದು ಎಂದರು. ಇದು ನಿಜವಾಗಿಯೂ ನನ್ನನ್ನು ನೋಯಿಸಿತು. ಏಕೆಂದರೆ ಮತಾಧಿಕಾರ : ಪಾತ್ರತೆಯ ಬಗೆಗೆ ನಾವೂ ಹಾಕಿದ ನಿರ್ಬಂಧದ ವಿಷಯಕ್ಕೆ ಶ್ರೀ ಭೋಪಟಕರರು ಅದರಲ್ಲಿ ಇಲ್ಲದ ಅರ್ಥವನ್ನು ಆರೋಪಿಸಿದ್ದಾರೆ. ಅವರು ಮಾಡಿದ ; ವಿವರಣೆ ಸರಿಯಲ್ಲ. ನಾವು ಹಾಕಿಕೊಂಡ ಕನಿಷ್ಠ ಮಿತಿ ಇದು. ಅದೇ ಸ್ವಾಭಾವಿಕ, ಏಕೆಂದರೆ ಈ ಕನಿಷ್ಠ ಮಿತಿಯನ್ನು ಅಂಗೀಕರಿಸದವರಿಗೆ ಮತದಾನದ ಅಧಿಕಾರ ಬಹಳ ಪವಿತ್ರ, ಅದಕ್ಕೆ ಕನಿಷ್ಠ ಮಿತಿಯನ್ನು ಹಾಕಲೇಬೇಕು. ಎಲ್ಲ ರಾಜಕೀಯ ಮತ್ತು ಇತರ ಸಮಾರಂಭಗಳ ಸಂದರ್ಭಗಳಲ್ಲೆಲ್ಲ ಖಾದಿಯನ್ನು ಹಾಕಿಕೊಳ್ಳಬೇಕು ಎಂಬುದು ಕನಿಷ್ಠ ಮಿತಿ. ಬೆಳಗಾಂವಿಯಲ್ಲಿ ಕಾಂಗ್ರೆಸ್ ಅಧಿವೇಶನ ಮುಗಿದ ಕೂಡಲೇ ಖಾದೀ ಉಡುಪನ್ನು ನೀವು ಕೈಬಿಡುತ್ತೀರಿ ಎಂದು ಅರ್ಥವಲ್ಲ. ಹಾಗೆ ಅದರ ಅರ್ಥ ಮಾಡಿದರೆ ನೀವು ಪರದೇಶಿ ವಸ್ತ್ರವನ್ನು ಪರಿಣಾಮಕಾರಿಯಾಗಿ ಬಹಿಷ್ಕರಿಸಲಾರಿರಿ ; ಈ ಒಪ್ಪಂದವನ್ನು ಓದಿ, ಅದರ ಸತ್ಯವನ್ನು ಅರ್ಥಮಾಡಿಕೊಳ್ಳಿ ಎನ್ನುತ್ತೇನೆ. ಕಾಂಗ್ರೆಸ್ ಸದಸ್ಯರಿಂದ ನಾವು ಅಪೇಕ್ಷಿಸುವ ಕನಿಷ್ಠ ಬಯಕೆ ಇದು ಎಂದಮೇಲೆ ಜನರಿಂದ ಇದಕ್ಕಿಂತ ಹೆಚ್ಚು ನಾವು ಹೇಗೆ ಅಪೇಕ್ಷಿಸಬಹುದು? ವಯಸ್ಕರಾದ ನಾವಷ್ಟೇ ಅಲ್ಲ ಮಕ್ಕಳು ಕೂಡ ಎಲ್ಲ ಸಂದರ್ಭಗಳಲ್ಲಿಯೂ ಖಾದಿಯನ್ನು ಧರಿಸಬೇಕು. ಎಂದರೆ ಖಾದಿ ನಮ್ಮೆಲ್ಲರ ನಿತ್ಯೋಪಯೋಗದ ವಸ್ತ್ರ ಆಗಬೇಕು. ಹಾಗೆ ಆಗದಿದ್ದರೆ ಬಹಿಷ್ಕಾರ ಯಶಸ್ವಿ ಆಗಲಾರದು.

ಇಷ್ಟ ಇಲ್ಲದಿರುವವರನ್ನು ತಾವು ಸ್ವಯಂ ನೂಲಬೇಕಾಗಿಲ್ಲ – ಎಂದು ಕೊಟ್ಟ ವಿನಾಯತಿ, ನೂಲದೇ ಇರಲು ಒಂದು ಅವಕಾಶ ಎನ್ನುತ್ತಾರೆ. ಆದರೆ ಒಪ್ಪಂದವನ್ನು ಹಾಗೆ ನಾನು ಓದುವುದಿಲ್ಲ. ನೀವು ಹಾಗೆ ಅರ್ಥಮಾಡುವದಾದರೆ ನಾಳೆ ಗೊತ್ತುವಳಿಯನ್ನು ನಿರಾಕರಿಸುತ್ತೇನೆ. ಅದರಿಂದ ಪರದೇಶೀ ವಸ್ತ್ರಬಹಿಷ್ಕಾರ ಅಸಾಧ್ಯವಾಗುತ್ತದೆ ಎಂದು ನನಗೆ ನೋವೆನಿಸುತ್ತದೆ. ಆದರೂ ಚಿಂತೆಯಲ್ಲ, ಇಷ್ಟವಿಲ್ಲದಿರುವ ಈ ಮಾತು ಬಂದಿರುವುದು ದೈಹಿಕವಾಗಿ ಅಸಮರ್ಥರಾಗಿ ಮತ್ತು ಇಷ್ಟವಿಲ್ಲದಿರುವವರಿಗಾಗಿ. ಮಕ್ಕಳು ಖಂಡಿತವಾಗಿಯೂ ಈ ವಿವರದಲ್ಲಿ ಬರುವುದಿಲ್ಲ. ಪರದೇಶೀ-ವಸ್ತ್ರ ಬಹಿಷ್ಕಾರವಾಗಬೇಕಾದರೆ ಈ ಒಪ್ಪಂದವನ್ನು ನೀವು ನಡೆಸಲೇಬೇಕು. ಪ್ರಾಮಾಣಿಕವಾಗಿ ನಾವು ಪ್ರಯತ್ನಿಸಿದರೆ ಸಫಲತೆ ಬಂದೇ- ಬರುತ್ತದೆ. ಪ್ರತಿನಿಧಿಗಳು ಹಳ್ಳಿಗಳಲ್ಲಿ ಹರಡಿಕೊಂಡು ರಾಟೆಯ ಸಂದೇಶವನ್ನು ಬೀರುತ್ತ ಬಂದರೆ, ನಮ್ಮಲ್ಲಿಯ ಉತ್ತಮೋತ್ತಮರ ಸಮಸ್ತಶಕ್ತಿಯು ಇದರಲ್ಲಿ ತೊಡಗಿಕೊಳ್ಳುತ್ತದೆ. ಇದರಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ ಈ ಗೊತ್ತುವಳಿಯನ್ನು ಸ್ವೀಕರಿಸುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ನಾಳೆ ನಾವು ಸೇರಿದಾಗ ಅದರ ಪೂರ್ಣ ಪರಿಣಾಮವನ್ನು ಅರಿತುಕೊಂಡು ನೀವು ಮತ ಕೊಡಿ. ಈ ಕಾರ್ಯಕ್ರಮವನ್ನು ನೀವು ಪ್ರಾಮಾಣಿಕವಾಗಿ ನಡೆಸದಿದ್ದರೆ, ಇದು ಸಫಲ ಆಗಲಾರದು. ಪ್ರತಿಯೊಬ್ಬ ಪ್ರತಿನಿಧಿಯೂ ಹಿಂದಕ್ಕೆ ಹೋದಾಗ ತಮ್ಮ ಪ್ರಾಂತದ ಹಳ್ಳಿಗರೊಂದಿಗೆ ಸಂಪರ್ಕ ಬೆಳೆಸಿಕೊಂಡು ಅವರು ಏನು ಮಾಡಬೇಕು ತಿಳಿಸಿ ಹೇಳಬೇಕು. ನಾಳೆ ಮತ ಕೊಡುವಾಗ ಇದರ ಪರಿಣಾಮವನ್ನು ಯೋಚಿಸಿ ವಿಚಾರಪೂರ್ವಕವಾಗಿ ಮತ್ತು ಮನಃಪೂರ್ವಕವಾಗಿ ಮತ ಕೊಡಬೇಕು. ನೀವು ಇಲ್ಲಿಂದ ಹೊರಟುಹೋಗುವ ಮೊದಲು ನಿಮಗೆ ಎಚ್ಚರಿಕೆ ಕೊಟ್ಟು ನಿಮ್ಮ ಮೇಲೆ ಇರುವ ಈ ಪವಿತ್ರ ಭಾರದ ಬಗ್ಗೆ ನಿಮಗೆ ನೆನಪು ಕೊಡುತ್ತೇನೆ. 27ನೇ ತಾರೀಖಿಗೆ ಎಲ್ಲ ಕೆಲಸವನ್ನು ಮುಗಿಸಿ,

ಒಂದು ದಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕೆಲಸಕ್ಕೆ ಕಾರ್ಯಕಲಾಪದ ವಿಧಾನಕ್ಕೆ ಕಾರ್ಯನಿರ್ವಾಹಕ ಸಮಿತಿಯ ನೇಮಕಕ್ಕೆ ಇಟ್ಟುಕೊಳ್ಳೋಣ.

(ಆಗ ಕೇಳ್ಕರ್ ಅವರು ಮಹಾತ್ಮಾ ಗಾಂಧೀಜಿಗೆ ಹೀಗೆ ಹೇಳಿದರು. "ನಿಮ್ಮ ವಿನಂತಿಯನ್ನು ಕೇಳಿದೆ. ಇದು ಸ್ವರಾಜ್ಯ ಪಕ್ಷದವರಿಗೆ ಆಯಿತು. ಇನ್ನೊಂದು ಭಾಗ ಇದೆಯೆಲ್ಲ ಒಪ್ಪಂದದ್ದು, ವಿಧಾನಸಭೆಯ, ಶಾಸನಸಭೆಯ ಕಾರ್ಯ, ಕಾಂಗ್ರೆಸ್ ಪರ ನಡೆಯಬೇಕು . ಶಾಸನಸಭಾ ಸದಸ್ಯರಿಗೆ ಸರ್ವ ವಿಧದಲ್ಲಿಯೂ ನೆರವಾಗಬೇಕು ಎಂದು ಅಪರಿವರ್ತನವಾದಿಗಳಿಗೆ ವಿನಂತಿಮಾಡಿ") ಕೇಳ್ಕರ್ ಅವರ ಮಾತು ನನಗೆ ಸಂಪೂರ್ಣ ಒಪ್ಪಿಗೆ. ಆಗಲೇ ಯಂಗ್ ಇಂಡಿಯಾದಲ್ಲಿ ಇದನ್ನು ಬರೆದಿದ್ದೇನೆ. ನಾಳಿನ ಕೆಲಸಕ್ಕೆ ಸಿದ್ಧ ಆಗುವ ಮೊದಲು ಅಪರಿವರ್ತನ ವಾದಿಗಳಿಗೆ ನಾನು ನೆನಪು ಕೊಡಬಯಸುತ್ತೇನೆ . ನಮ್ಮ ವಿನಂತಿ ಕೇವಲ ಸ್ವರಾಜ್ಯ ಪಕ್ಷಕ್ಕಲ್ಲ. ಅಪರಿವರ್ತನವಾದಿಗಳಲ್ಲೂ ನೂಲುವ ಮತಕ್ಕೆ ವಿರುದ್ಧವಾದವರು ಇದ್ದಾರೆ ಎಂದು ಕೇಳಿದ್ದೇನೆ.

ಆದ್ದರಿಂದ ಅಪರಿವರ್ತನವಾದಿಗಳಿಗೆ ನನ್ನ ವಿನಂತಿ ಇಷ್ಟು – ಈ ಒಪ್ಪಂದವನ್ನು ನನ್ನ ಮನಸ್ಸಿನಂತೆ ಅವರು ಅಂಗೀಕರಿಸಿ ಅದರಂತೆ ನಡೆಯಬೇಕು. ನನ್ನ ಸಾಮರ್ಥ್ಯ ಇದ್ದಷ್ಟು ಒಬ್ಬ ಮನುಷ್ಯ ಎಷ್ಟು ಮಾಡಬಹುದೋ ಅಷ್ಟೂ ಸಹಾಯ ಸ್ವರಾಜ್ಯಪಕ್ಷಕ್ಕೆ ಮಾಡುತ್ತೇನೆ; ಯಾವ ವಿಧದಲ್ಲಿಯೂ ಅವರ ಆಶಯಕ್ಕೆ ಧಕ್ಕೆ ತರುವುದಿಲ್ಲ. ಅವರ ಆಶಯ ಏನು ಎಂದು ತಿಳಿದೂ ತಿಳಿದೂ ಹೇಳುತ್ತಿದ್ದೇನೆ. ಏಕೋ ಏನೋ ಅವರ ವಿಧಾನಗಳು ನನಗೆ ಸರಿಬರುವುದಿಲ್ಲ. ಅವರ ಆಶಯ ಅವರದೇ ಅಲ್ಲ, ಕಾಂಗ್ರೆಸ್ಸಿನದು ಅಲ್ಲ, ಇಡೀ ರಾಷ್ಟ್ರದ್ದು.

ನಾನು ಇದನ್ನು ತೀರ್ಮಾನಿಸಲಾರೆ. ಇದೇನು ಬಂತು ರಾಟೆ ಎಂದು ಹೇಳಲು ಅವರಿಗೆ ಸಂಪೂರ್ಣ ಹಕ್ಕು ಇದೆ. ಹಾಗೇ ನನಗೂ ಹಕ್ಕು ಇದೆ, ಇದೇನು ಈ ಶಾಸನಸಭೆಗಳ ಮಾತು ಎಂದು ಹೇಳಲು. ನೌಕರಶಾಹಿಯನ್ನು ಎದುರಿಸಲು ಇದೊಂದು ಮುಖ್ಯ ಸಾಧನ ಎಂದು ಅವರು ಹೇಳುತ್ತಾರೆ. ನನಗೆ ಅವರ ದಾರಿ ಸರಿಕಾಣುವದಿಲ್ಲ. ಆದರೂ ನಾನು ಸ್ವರಾಜ್ಯ ಪಕ್ಷಕ್ಕೆ ನೆರವಾಗಬಲ್ಲೆ. ಅವರ ಧೋರಣೆಗೆ ಕಾಂಗ್ರೆಸ್ಸಿನಲ್ಲಿ ನಿಶ್ಚಿತವಾದ ಸ್ಥಾನ ಕೊಡಬಲ್ಲೆ.

ಸದಸ್ಯ: – ಕಾಂಗ್ರೆಸ್ಸಿನ ಹೆಸರಿನಲ್ಲೇ – ಎಂದು ಪ್ರಶ್ನೆ ಕೇಳಿದರು.

ಉತ್ತರ: ಹೌದು, ಕಾಂಗ್ರೆಸಿನ ಹೆಸರಿನಲ್ಲೇ. ಅವರಿಗೆ ಹೇಗೆ ಸಹಾಯ ಮಾಡಲೆಂದು ಸುತ್ತೂ ಹುಡುಕುತ್ತಿದ್ದೆ. ಈ ಒಪ್ಪಂದ ಹೊಳೆಯಿತು. ನಾನು ಅವರಿಗೆ ಮಾಡಿದ ಅನುಗ್ರಹ ಏನೂ ಇಲ್ಲ. ಇದು ಅವರ ಹಕ್ಕು. ಆದರೆ ಇದು ಅವರ ಹಕ್ಕು ಎಂದು ತಿಳಿದುಕೊಳ್ಳಲು ಸ್ವಲ್ಪ ತಡಮಾಡಿದೆ. ಇಷ್ಟು ತಿಳಿದಮೇಲೆ ನಾನು ಅವರ ಕಾರ್ಯಕ್ರಮಕ್ಕೆ ಮನಸಿನಿಂದಲೂ ಅಡ್ಡಿ ತೋರಬಾರದು. ಅದರ ಬದಲು ಅವರು ಮಾಡುತ್ತಿರುವ ಕಾಟವೂ ಕೂಡ ಸರಿ ಎಂದು ನನ್ನ ಮನಸ್ಸನ್ನು ಗಟ್ಟಿ ಮಾಡಿಕೊಳ್ಳಲು ಪ್ರಯತ್ನಿಸಬೇಕು . ನೀವೂ ಹಾಗೆ ಮಾಡಬೇಕು ಎಂದು ನನ್ನ ವಿನಂತಿ .ಆದ್ದರಿಂದಲೇ ನನ್ನ ದಾರಿಬಿಟ್ಟುಹೋಗಿ ಪ್ರತಿಯೊಬ್ಬ ಸ್ವರಾಜ್ಯ ಪಕ್ಷದವರನ್ನು ಸಂಪರ್ಕ ಮಾಡಿಕೊಳ್ಳುತ್ತಿದ್ದೇನೆ. ಅವರ ವಾದಕ್ಕೆ ಅವರ ಸಲಹೆಗಳಿಗೆ. ನನ್ನದು ಮುಕ್ತಮನಸ್ಸು . ನಾನು ಸ್ವರಾಜ್ಯ ಪಕ್ಷದವರಿಗೆ ವಿನಃ ಹೀಗೆಯೇ. ಇದರಿಂದ ನಾನು ವೇದಿಕೆಗಳ ಮೇಲೆ ಭಾಷಣ ಮಾಡಿ ಸರಕಾರದ ಧೋರಣೆಯ ಬಗ್ಗೆ ಮಾತಾಡಿ ಸಭೆಗಳನ್ನು ನಡೆಸುತ್ತೇನೆ ಎಂದು ಮುಂತಾಗಿ ಅರ್ಥಮಾಡಿದರೆ ನಾನು ಹಾಗೆ ಮಾಡಲಾರೆ; ಏಕೆಂದರೆ ನನಗೆ ಅದರಲ್ಲಿ ಮನಸ್ಸಿಲ್ಲ. ನಾನು ಒಪ್ಪಂದಕ್ಕೆ ಒಪ್ಪಿಕೊಂಡದ್ದು ಈ ಅರ್ಥದಲ್ಲಿ ಅಲ್ಲ. ಇವು ನನ್ನ ಮಿತಿ. ನನಗೆ ಇದನ್ನೆಲ್ಲ ಮಾಡಬಾರದೆಂದಿಲ್ಲ. ಆದರೆ ನಾನು ಮನಗಾಣಬೇಕು. ಮನಗಂಡ ಕೂಡಲೇ ನಾನು ಸ್ವರಾಜ್ಯವಾದಿಯೆಂದು ಸಂಪೂರ್ಣವಾಗಿ ಘೋಷಿಸಿದ್ದೇನೆ. ಈ ಪೃಥ್ವಿಯ ಮೇಲಿನ ಯಾವದೂ ನನ್ನನ್ನು ತಡೆಯಲಾರದು. ಆಮೇಲೆ ನನ್ನಿಂದ 24 ಗಂಟೆಯನ್ನೂ, ನನ್ನ ಜಾಗೃತಿಯ ಎಲ್ಲ ಸಮಯವನ್ನೂ ನಿರೀಕ್ಷಿಸಬಹುದು. ಇವತ್ತು ನಾನು ಪೂರ್ಣ ಮನಸ್ಸಿನ ಸಹಕಾರವನ್ನು ನೀಡಲಾರೆ. ಆದರೆ ನನ್ನ ಮಿತಿಯಲ್ಲಿ ಖಂಡಿತವಾಗಿಯೂ ಅವರಿಗೆ ಪ್ರೋತ್ಸಾಹಕರ, ಮನಃಪೂರ್ಣ ಸಹಕಾರ ಕೊಡಬಲ್ಲೆ. ಉದಾಹರಣೆಗೆ ಸರಕಾರ ನಿಮಗೂ ನಿಮ್ಮ ಕೀರ್ತಿ ಪ್ರತಿಷ್ಠೆಗೂ ಆತಂಕ ಒಡ್ಡಿದರೆ, ನಿಮ್ಮ ಜೊತೆ ಜೊತೆಗೆ ನಾನು ಕೂಡ ನಿಮಗೆ ನೆರವಾಗಲು ಬರುತ್ತೇನೆ. ನಿಮ್ಮ ಜೊತೆಗೆ ಕಷ್ಟ ಅನುಭವಿಸುತ್ತೇನೆ. ಒಂದು ವೇಳೆ ನೀವು ನನ್ನ ಸಹಕಾರ ಬೇಡವೆಂದರೂ, ದಯವಿಟ್ಟು ನನ್ನ ಸಹಾಯ ತೆಗೆದುಕೊಳ್ಳಿ ಎಂದು ಬೇಡುತ್ತೇನೆ. ಖಾಸಗಿಯಾಗಿ ಈ ಧೋರಣೆ ಒಳ್ಳೆಯದು ಎಂದು ಹೇಳಿರಿ – ಎಂದರೆ ನನ್ನ ಅರ್ಥ ಅದಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಒಂದು ಮಾತು. ನಿಮ್ಮನ್ನು ಯಾರಾದರೂ ಖಾಸಗಿಯಾಗಿ ಕೇಳಿದರೆ, ರಾಟೆಯಲ್ಲಿ ಅವರಿಗೆ ನಂಬಿಕೆ ಇಲ್ಲದಿದ್ದರೂ ನೂಲಬೇಕು ಎಂದು ಹೇಳಿರಿ. ನಿಮಗೆ ರಾಟೆಯಲ್ಲಿ ನಂಬಿಕೆ ಇಲ್ಲದೆ ಇಲ್ಲ ಎನ್ನುತ್ತೀರಿ. ನಿಮಗೆ ನಂಬಿಕೆ ಇಲ್ಲದಿದ್ದರೆ ಈ ಒಪ್ಪಂದವನ್ನು ತಿರಸ್ಕರಿಸಿರಿ. ಇಲ್ಲದಿದ್ದರೆ ನಿಮ್ಮ ವಿಶ್ವಾಸಕ್ಕೆ ಭಂಗ ಬರುತ್ತದೆ.

ಕೇಳ್ಕರ್: ಈ ಕೆಲಸ ಅವರವರ ಮನಸ್ಸಿನ ವಿಶ್ಲೇಷಣಾತ್ಮಕ ವಿಚಾರಕ ತಕ್ಕಂತೆ ಇರುತ್ತದೆ. ಸ್ವರಾಜ್ಯಪಕ್ಷದಲ್ಲಿ ಅನೇಕರಿಗೆ ಒಂದು ಮಾನಸಿಕ ಪ್ರತಿಬಂಧ ಇದೆ. ಅವರಿಗಾಗಿ ನೀವು ಸ್ವಲ್ಪ ಅವಕಾಶ ಕೊಡಬೇಕು. ಈ ಮಾನಸಿಕ ಪ್ರತಿಬಂಧ ರಾಟೆಯಿಂದ ಏನೂ ಪ್ರಯೋಜನವಿಲ್ಲ ಎನ್ನುವಷ್ಟು ದೂರ ಹೋಗಿದ್ದರೆ ಆಗ ನೀವು ಒಪ್ಪಂದವನ್ನು ತಿರಸ್ಕರಿಸಬೇಕು.

ರಾಟೆಯ ಬಗ್ಗೆ ಸ್ವರಾಜ್ಯ ಪಕ್ಷದಿಂದ ನಾನು ಬಯಸುವ ಸಹಕಾರ, ನನ್ನಿಂದ ಅವರು ಶಾಸನ ಸಭೆಗಳ ಸದಸ್ಯರ ಬಗ್ಗೆ ನಿರೀಕ್ಷಿಸುವ ಸಹಕಾರ, ಒಂದೇ ಸಾರಾ ಅಲ್ಲ, ಒಂದೇ ಪರಿಮಾಣದ್ದೂ ಅಲ್ಲ. ಅದನ್ನು ಒಪ್ಪಂದದಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಅಸಾಧ್ಯ ಕಾರ್ಯಗಳನ್ನು ನಿಮ್ಮಿಂದ ನಾನು ನಿರೀಕ್ಷಿಸುವದಿಲ್ಲ. ನಾನು ನಿರೀಕ್ಷಿಸುವುದು ಯಥಾಶಕ್ತಿ ಪ್ರಾಮಾಣಿಕತೆ, ನಂಬಿಕೆ: ಅಷ್ಟೇ ಸಾಕು. ಈ ಒಪ್ಪಂದವನ್ನು ಈ ದೃಷ್ಟಿಯಿಂದ ಪ್ರತಿಯೊಬ್ಬರೂ ನೋಡಿ ಎನ್ನುತ್ತೇನೆ. ಈ ದೃಷ್ಟಿ ಇಲ್ಲದಿದ್ದರೆ ಚಳವಳಿ ವಿಫಲವಾಗುತ್ತದೆ ಎಂದು ತಾನು ಹೇಳುತ್ತೇನೆ. ಆಗಲೂ ನಾನು ವಿಫಲ ಆದೆ ಎಂದಲ್ಲ. ಬಹುಶಃ ನನ್ನನ್ನು ಅಹಂಕಾರಿ, ವಿಲಕ್ಷಣ ಎಂದು ನೀವು ಕರೆಯಬಹುದು. ಈಗಾಗಲೆ ಕೆಲವರು ಯುರೋಪಿಯನ್ನರು ಕೆಲವರು ಭಾರತೀಯರು ನನಗೊಬ್ಬನಿಗೆ ಮನುಷ್ಯ ಸ್ವಭಾವ ಗೊತ್ತು ಎನ್ನುತ್ತೇನೆ ಎನ್ನುತಾರೆ. ನನ್ನದು ಸರಿ ಎಂದು ನನ್ನ ನಂಬಿಕೆ.

ಇತರರು ಹೇಳಿದುದೂ ಇಷ್ಟೇ ಸರಿ ಇರಬಹುದು. ನಾನು ಸರಿ ಎಂಬ ನಂಬಿಕೆ ನನಗಿಲ್ಲದಿದ್ದರೆ, ನನ್ನ ಮಾರ್ಗ ಸರಿ ಎಂದು ನಾನು ನಂಬದಿದ್ದರೆ ಚುಕ್ಕಾಣಿ ಹಿಡಿಯಲು ನಾನು ಅಯೋಗ್ಯ, ನಾನು ತಿದ್ದಿಕೊಳ್ಳಬೇಕು ಎನ್ನುವುದು ಆ ಕೆಟ್ಟ ಮನಸ್ಸನ್ನು. ಕೇಳ್ಕರರು ಹೇಳುವ ಆ ಮಾನಸಿಕ ಪ್ರತಿಬಂಧವನ್ನು . ಅಂಥದು ಏನೂ ಇರಬಾರದು. ಸ್ವರಾಜ್ಯ ಪಕ್ಷದವರು ಭಾರತದ ವೈರಿಗಳೆಂದು ಯಾರೂ ತಿಳಿಯಬಾರದು. ಅರಾಜಕತಾವಾದಿಗಳೂ ಕೂಡಾ ಭಾರತದ ಶತ್ರುಗಳು ಎಂದು ನಾನು ತಿಳಿದಿಲ್ಲ. ತನಗೆ

ತೋಚಿದಂತೆ ಅವನು ಮಾಡುತ್ತಾನೆ. ನಾನು ಹೇಗೆ ತೀರ್ಪು ಕೊಡಲಿ? ಅವನ ಕೃತಿಯನ್ನು ಮಾತ್ರ ನಾನು ವಿಮರ್ಶೆ ಮಾಡಬಲ್ಲೆ. ಆದರೆ ಇಲ್ಲಿ ಯಾವ ಹೋಲಿಕೆಯೂ ಇಲ್ಲ.

ಅಪರಿವರ್ತನವಾದಿಗಳಿಗೆ ಹೇಳುತ್ತೇನೆ – ನಿಮಗೆ ರಾಟೆಯ ಬಗ್ಗೆ ನಂಬಿಕೆ ಇಲ್ಲದೆ ಇದ್ದರೆ ನಿಮಗೆ ಬೇರೆ ಯಾವ ದಾರಿಯೂ ಇಲ್ಲ. ಹಿಂಸೆಯಲ್ಲಿ ತೊಡಗಬೇಕು ಅಷ್ಟೇ. ನಿಮ್ಮ ದೇಶಭಕ್ತಿಗೆ ರಾಟೆ ತೃಪ್ತಿ ಕೊಡದು ಎನಿಸಿದರೆ ಶಾಸನ ಸಭೆಗಾದರೂ ಹೋಗಿ. ಅಲ್ಲಿ ಒಂದು ಮಿಂಚು ಹರಿಯಿಸಿ. ಕೆಲವರು ಕೈದಿಗಳನ್ನಾದರೂ ಬಿಡಿಸಬಹುದು. ಇವತ್ತು ಸ್ವರಾಜ್ಯ ಪಕ್ಷದವರೂ ತಮ್ಮ ಆದರ್ಶಗಳನ್ನೆಲ್ಲ ಗಾಳಿಗೆ ತೂರಿ, ಅಂಡಮಾನ ದ್ವೀಪದಲ್ಲಿರುವ ಕೆಲವರು ಕೈದಿಗಳನ್ನು ಬಿಡುಗಡೆ ಮಾಡಬಯಸಿದರೆ ಅದು ನಡೆಯಬಹುದು. ಆದರೆ ತಾವೇ ಕೈಕೊಂಡ ಹೊಣೆಗೆ ಅವರು ನಿಷ್ಠರು. ದೇಶಕ್ಕಾಗಿ ಇಂಥ ಹಾನಿಕರ ವ್ಯವಹಾರವನ್ನು ಮಾಡರು. ಅವರು ಶಾಸನಸಭೆಗೆ ಹೋದದ್ದು ಅಂಡಮಾನ್ ಸೆರೆಯಾಳುಗಳನ್ನು ಬಿಡಿಸಲಿಕ್ಕೆ ಅಲ್ಲಲ ಅಥವಾ ಯರವಡಾ ಜೇಲಿನಲ್ಲಿ ಬಳಲುತ್ತಿರುವ ಒಬ್ಬ ಬಡಪಾಯಿಯನ್ನು ಬಿಡಿಸಲೂ ಅಲ್ಲ. ಎಷ್ಟೋ ಸಲ ನಾನು ಹೇಳಿದ್ದೇನೆ, ನಿಮಗೆ ರಾಟೆಯಲ್ಲಿ ನಂಬಿಕೆ ಇಲ್ಲದಿದ್ದರೆ. ನಿಮಗೆ ಇರುವ ಇನ್ನೊಂದು ದಾರಿ ಶಾಸನಸಭಾ ಪ್ರವೇಶ ಒಂದೇ. ಎಷ್ಟೋ ಜನ ಶಾಸನ ಸಭೆಗೆ ಹೋಗುತ್ತಾರಲ್ಲ. ಅಲ್ಲಿ ಏನಾದರೂ ಮಾಡಬಹುದೆಂಬ ಆಶೆಯೇ ಶಾಸನ ಸಭೆಗೆ ಹೋಗುವವರ ರಹಸ್ಯ, ಶಾಸನಸಭೆಗೆ ಹೋಗುವವರು ನಮ್ಮಲ್ಲಿ ವಿಶೇಷ ಬುದ್ಧಿವಂತರ ಪ್ರತಿನಿಧಿಗಳು. ಚನ್ನಾಗಿ ತರಬೇತಾದ ಸಿಪಾಯಿಗಳು. ಉದಾಹರಣೆಗೆ, ಪಂಡಿತ್ ಮಾಲವೀಯರ ಹಾಗೆ ತ್ಯಾಗ ಮಾಡಿದ ಮನುಷ್ಯ ಸಿಕ್ಕುತ್ತಾನೆಯೇ?

1901ರಲ್ಲಿ ಸರ್ ದಿವಾನ್ ಷಾ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನಲ್ಲಿ ಭಾಷಣ ಮಾಡಿದಾಗಿನಿಂದಲೂ ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರು ಎಷ್ಟೋ ಕೆಲಸ ಮಾಡಿದ್ದಾರೆ. ಶಾಸನ ಸಭೆಯಲ್ಲೂ ಇದ್ದಾರೆ. ಈಗಲೂ ಶಾಸನ ಸಭೆಗೆ ಅಂಟಿಕೊಂಡಿರುತ್ತಾರೆ. ಅವರೇನೂ ಮೂರ್ಖರಲ್ಲ . ಅವರನ್ನು ನೋಡಿದಾಗಲೆಲ್ಲ ನನ್ನ ತಲೆ ಬಾಗುತ್ತದೆ. ಸಿ .ಆರ್.ದಾಸ್ ಯಾರು? ಪಂಡಿತ್ ಮೋತಿಲಾಲ್ ನೆಹರು ಸಹ ..ಇವತ್ತು ಅವರು ಹೀಗೇಕೆ ಬಟ್ಟೆ ಉಡುತ್ತಾರೆ? ಪಂಡಿತ್ ಮೋತಿಲಾಲ ನೆಹರು ಹಿಂದೆ ರಾಜಮಹಾರಾಜನಂತೆ ಬದುಕುತ್ತಿದ್ದರು. ಅವರು ಲಾಹೋರಿಗೆ ಮೋಟಾರಿನಲ್ಲಿ ಬಂದಾಗ ಅವರ ಬೆಂಬತ್ತಿ ಸೇವಕರ ದಂಡಿಗೆ ದಂಡೇ ಬಂದಿತ್ತು. ರಾಜಮಹಾರಾಜರು ಸಹ ಅವರ ಹಾಗೆ ಬಾಳಲಿಲ್ಲ. ಹಿಂದೆ ಗುಲಾಬಿ ಹೂಗಳಿಂದ, ಇತರ ಹೂಗಳಿಂದ ಅಂದವಾಗಿದ್ದ ಅವರ ತೋಟದಲ್ಲಿ ಇವತ್ತು ಕಸ ಬೆಳೆಯುತ್ತಿದೆ. ಅವರು ದೇಶದ್ರೋಹಿಯೇ? ಇವರನ್ನು ನೋಡಿದಾಗಲೆಲ್ಲ ನನ್ನ ತಲೆ ಬಾಗುತ್ತದೆ, ಇವರ ದೃಷ್ಟಿಯಂತೆ ನನ್ನ ದೃಷ್ಟಿ ಇಲ್ಲದೆ ಹೋದುದಕ್ಕೆ ಅವರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲಾರದುದಕ್ಕೆ ನನ್ನಲ್ಲಿಯೇ ಏನೋ ಅಪೂರ್ಣತೆ ಇದೆ ಎಂದುಕೊಳ್ಳುತ್ತೇನೆ.

ಈ ಕೇಳ್ಕರರು ತಾನು ಭವಿಷ್ಯಕಾಲಕ್ಕೆ ಕೀರ್ತಿ ಕಾಯರಾಗಿ ಉಳಿಯುವ ಭೂ ಶ್ರೇಷ್ಠನೊಬ್ಬನ ಪ್ರತಿನಿಧಿ. ಆತನನ್ನು ಮುಂದಿನ ಪೀಳಿಗೆಯವರು ದೇವರು ಎಂದು ಪೂಜಿಸುವರು. ಈ ದೇಶದಲ್ಲಿ ದೇವರು ಒಬ್ಬ, ನಾಮ ಹಲವು. ಆದ್ದರಿಂದ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನಿಮ್ಮ ಹೃದಯ ಶುದ್ಧಿ ಮಾಡಿಕೊಳ್ಳಿರಿ. ಔದಾರ್ಯ ಇರಲಿ. ನಿಮ್ಮ ಹೃದಯಗಳು ಸಮುದ್ರದಷ್ಟು ವಿಶಾಲ ಆಗಲಿ. ಖುರಾನ್ ಹೇಳುವದೂ ಇದೇ.

ಭಗವದ್ಗೀತೆ ಹೇಳುವದೂ ಇದೇ. ಇನ್ನೊಬ್ಬರನ್ನು ಹೀಗೆ ಹಾಗೆ ಎಂದು ಎನ್ನಬೇಡಿ, ನಿಮ್ಮನ್ನೂ ಹೀಗೆ ಎಂದಾರು . ಎಲ್ಲವನ್ನೂ ನಿರ್ಧರಿಸುವ ಪರಮೋಚ್ಚ ನ್ಯಾಯಾಧಿಪತಿ ದೇವರು. ಆತ ನಿಮ್ಮನ್ನು ಗಲ್ಲಿಗೆ ಹಾಕಬಹುದು "ಅತ ನಿಮ್ಮನ್ನು ಬದುಕಗೊಟ್ಟಿದ್ದಾನೆ. ನಿಮ್ಮ ಸುತ್ತಲೂ ಅನೇಕ ವೈರಿಗಳಿದ್ದಾರೆ. ನಿಮ್ಮ ಒಳಗೂ ಇದ್ದಾರೆ. ಆದರೆ ಆತನ ಕಾಯುವ ಕೈ ಸದಾ ಕಾಯುತ್ತದೆ; ಆತನ ಕಣ್ಣು ಸದಾ ನಿಮ್ಮ ಮೇಲೆ ಇರುತ್ತದೆ.

ಕೇಳ್ಕರ್ ಅವರ ಧೋರಣೆ ಭ್ರಷ್ಟ. ಅವರೆಲ್ಲರೂ ವಂಚಕರು, ಅಥವಾ ಅಪ್ರಮಾಣಿಕರು, ದೂರದೃಷ್ಟಿ ಇಲ್ಲದ ರಾಜಕಾರಣಿಗಳು ಎಂದೇಕೆ ನಾವು ಹೇಳಬೇಕು? ಮಾನವ ಸ್ವಭಾವವನ್ನು ಹೀಗೆ ತೆಗಳುವ ಬುದ್ಧಿ ಬರದಂತೆ ದೇವರು ನಮ್ಮನ್ನು ರಕ್ಷಿಸಲಿ. ಈ ಜಗತ್ತು ಇರುವವರೆಗೆ ಮತಭೇದ ಇದ್ದೇ ಇರುತ್ತದೆ. ಅಪರಿವರ್ತನವಾದಿಗಳ ಮಹತ್ತರ ಸಾಧನೆಯೆಂದರೆ ತಮ್ಮ ಇದಿರಾಳುಗಳು ಎಂದು ತಿಳಿದವರನ್ನು ನಿಜವಾದ ಗೆಳೆಯರನ್ನಾಗಿ ಮಾಡಿಕೊಂಡು ರಾಟೆಯ ಪಂಥಕ್ಕೆ ಅವರ ಮನ ಒಲಿಸುವುದು. ನನ್ನಲ್ಲಿ ವಿಶ್ವಾಸವಿಡಿರಿ. ಅಪರಿವರ್ತನವಾದಿಗಳು ನಿಂದೆ ಮಾಡುವುದನ್ನು ನಿಲ್ಲಿಸಿ ತಮ್ಮ ಕರ್ತವ್ಯವನ್ನು ತಾವು ಮಾಡಿದರೆ, ಮತ್ತು ರಾಟೆಗೆ ಅಂಟಿಕೊಂಡು ಅದಕ್ಕಾಗಿ ಪ್ರಾಣತೆತ್ತರೆ, ಪರಿವರ್ತನಾವಾದಿಗಳನ್ನು ಚರಖಾ ಪಂಥಕ್ಕೆ ಪರಿವರ್ತಿಸಿಕೊಳ್ಳಬಹುದು. ಜನರು ರಾಟೆಯನ್ನು ಒಪ್ಪದಿದ್ದರೆ, ಅದರ ಕಾರಣ ಅದರ ಪ್ರಯೋಜನ ಅವರಿಗೆ ಗೊತ್ತಿಲ್ಲ. ನೀವು ಅದನ್ನು ಅವರಿಗೆ ತೋರಿಸಿಕೊಡಬೇಕು . ನಾನು ರಾಟೆಯ ಹಾಡನ್ನು ಹೇಳುತ್ತಿದ್ದೇನೆ. ಏಕೆಂದರೆ, ಅದರಿಂದಲೇ ದೇಶಕ್ಕೆ ಮೋಕ್ಷ ಎಂದು .

ನನ್ನ ಅಜೇಯ ಶ್ರದ್ಧೆ ಇಲ್ಲದೆ ಹೋದರೆ ಹಿಂದೂ ಧರ್ಮದ ಒಳಗೆ ಏನಿದೆ? ಒಂದು ವೇಳೆ ನೀವು ನಂಬಿದ ರಾಟೆ ಇತರರಿಗೆ ಒಳ್ಳೆಯದು ಅಲ್ಲದೇ ಇದ್ದರೂ ನಮಗೆ ಮಾತ್ರ ಅದೇ ಸರ್ವಸ್ವ . ಕಾಶೀ ವಿಶ್ವನಾಥನ ದೇವಾಲಯದ ಲಿಂಗ ಮೌಲನಾ ಹಜರತ್ 'ಮೋಹಾನಿಗೆ ಬರಿ ಕಲ್ಲೇ ಆಗಬಹುದು. ಅಲ್ಲಿಗೆ ನಾನು ಹೋದರೆ ನನ್ನ ಹೃದಯ ಕರಗಬೇಕು, ಶ್ರದ್ಧೆಯೇ ಮುಖ್ಯ . ಹಸುವನ್ನು ಕಂಡರೆ ನನಗದು ತಿನ್ನುವ ಪ್ರಾಣಿ ಅಲ್ಲ. ಅದೊಂದು ಕರುಣೆಯ ಕಾವ್ಯ. "ನಾನದನ್ನು ಪೂಜಿಸುತ್ತೇನೆ. ಇಡೀ ಜಗತ್ತಿನ ಎದುರು ಅದರ ಪೂಜೆಯನ್ನು ಸಮರ್ಥಿಸಿಕೊಳ್ಳುತ್ತೇನೆ. ದೇವರು ಇರುವದು ಒಬ್ಬನೇ. ಆದರೆ ಕಲ್ಲಿನಲ್ಲಿ, ಆಂಗ್ಲನಲ್ಲಿ , ಇಷ್ಟೇಯೇಕೆ ದೇಶದ್ರೋಹಿಯಲ್ಲಿ ಕೂಡ ನಾನು ದೇವರನ್ನು ಕಾಣುತ್ತೇನೆ. ಈ ಸಾಮರ್ಥ್ಯ ದೇವರದು. ದೇಶದ್ರೋಹಿಯನ್ನು ಕೂಡ ದ್ವೇಷಿಸಲಾರೆ. ಅಲ್ಲಿಯವರೆಗೆ ಒಯ್ಯುತ್ತದೆ ನನ್ನ ಧರ್ಮ. ಅಪರಿವರ್ತನವಾದಿಯಾದ ಪ್ರತಿಯೊಬ್ಬನಿಗೂ ಹೇಳುತ್ತೇನೆ – ನಿಮ್ಮ ಪಂಥಕ್ಕೆ ನೀವು ಯೋಗ್ಯರು ಎನಿಸಿಕೊಳ್ಳಬೇಕಾದರೆ,ಅಹಿಂಸಾವಾದಿಗಳಾಗಿದ್ದರೆ , ಸ್ವರಾಜ್ಯ ಪಕ್ಷದವರೊಡನೆ ಕೈಕುಲುಕಿ, ನಾವು ಮಾಡಿದ್ದಕ್ಕೆ ಕ್ಷಮಿಸಿ ಎಂದು ಕೇಳಿಕೊಳ್ಳಿ ಎನ್ನುತ್ತೇನೆ. ಯಾರೊಬ್ಬರ ಬಗ್ಗೆಯೂ ಅಸಾಧು ಭಾವನೆಯನ್ನು ತಳೆಯಲು ನಿಮಗೆ ಹಕ್ಕು ಇಲ್ಲ. ಅವರ ವಿರುದ್ಧವಾಗಿ ಒಂದೇ ಒಂದು ಮಾತನ್ನು ಹೇಳಲು ಕೂಡ ನಿಮಗೆ ಹಕ್ಕು ಇಲ್ಲ. ಈ ಉತ್ತಮ ಸೂತ್ರವನ್ನು ಅನುಸರಿಸಿ. ಇದಕ್ಕಿಂತ ಉತ್ತಮ ಸೂತ್ರವನ್ನು ನಾನು ಕೊಡಲಾರೆ. ಇದನ್ನು ಅನುಸರಿಸಲು ದೇವರು ನಿಮಗೆ ಶಕ್ತಿ ಕೊಡಲಿ. ವರ್ಷದ ಕೊನೆಯಲ್ಲಿ ಎಲ್ಲವೂ ಸರಿಹೋಗುತ್ತದೆ.

(ಸರಣಿ ಲೇಖನ ಮುಂದುವರಿಯುತ್ತದೆ)

■

ಗಾಂಧಿವಾದಿ ಹೆಚ್. ಸಿ. ದಾಸಪ್ಪ ಚಿತ್ರ ಸಂಪುಟ



ಭೂದಾನ ಚಳವಳಿ ವಿನೋಬಾ ಭಾವೆಯವರೊಂದಿಗೆ ಹೆಚ್. ಸಿ. ದಾಸಪ್ಪ



ಸಾಬರಮತಿ ಆಶ್ರಮದಲ್ಲಿ ಗಾಂಧೀಜಿ ಅವರೊಂದಿಗೆ ಹೆಚ್. ಸಿ. ದಾಸಪ್ಪ (ಸಬರಮತಿ ಅಂತ ಬಹುಜನ ತಪ್ಪು ಬರೆಯುತ್ತಾರೆ. ಸಾಬರ ಮತಿ ಸರಿಯಾದ ಉಚ್ಚಾರಣೆ. ಸಾಬರ ಮತಿ ಎಂದರೆ ಸಂಸ್ಕೃತದಲ್ಲಿ ಪ್ರಶಾಂತ ಮತ್ತು ಸಾವಧಾನ ಅಂತ ಅರ್ಥ. ರಾಜಸ್ತಾನದ ಉದಯ್ ಪುರ್ ನಲ್ಲಿ ಹುಟ್ಟಿ ಗುಜರಾತ್ ನ ಅರಬ್ಬೀ ಸಮುದ್ರ ಸೇರುವ ಸಾಬರಮತಿ ನದಿ ದಡದಲ್ಲಿ ಗಾಂಧೀಜಿ ಆಶ್ರಮ ಕಟ್ಟಿದ್ದರಿಂದ ಸಾಬರಮತಿ ಆಶ್ರಮ ಅಂತ ಕರೆಯಲಾಗಿದೆ)



ಹೆಚ್. ಸಿ. ದಾಸಪ್ಪ ಕುಟುಂಬ – ಮಹಾವೀರ್ ತ್ಯಾಗಿಯವರ ಮಗಳು ಮಳವಳ್ಳಿಯ ಒಕ್ಕಲಿಗ ವೈದ್ಯರೊಂದಿಗೆ ಪ್ರೇಮ ವಿವಾಹವಾಗಿದ್ದರು. ಈ ಮದುವೆಗೆ ಮಳವಳ್ಳಿಯ ವೈದ್ಯರ ತಂದೆ ಒಪ್ಪಿರಲಿಲ್ಲ . ಇವರ ಮನ ಒಲಿಸಿದ ಕಾಂಗ್ರೆಸ್ ನಾಯಕ ಸಾಹುಕಾರ್ ಚೆನ್ನಯ್ಯನವರು ಖುದ್ದು ನಿಂತು ಈ ಮದುವೆ ಮಾಡಿಸಿದ್ದರು



1962–67ರವರೆಗೆ ಉಪರಾಷ್ಟ್ರಪತಿ ಮತ್ತು 1967–69ರವರೆಗೆ ರಾಷ್ಟ್ರಪತಿಯಾಗಿದ್ದ ಝಾಕೀರ್ ಹುಸೇನ್ ಹಾಗೂ ಮತ್ತಿತರರ ಜೊತೆ ಹೆಚ್ ಸಿ ದಾಸಪ್ಪ .



ಮಡಿಕೇರಿಯಲ್ಲಿ ಶಾಲಾ ಸಹಪಾಠಿ ಆಗಿದ್ದ ಫೀಲ್ಡ್ ಮಾರ್ಷಲ್ ಕಾರ್ಯಪ್ಪರೊಂದಿಗೆ ರಾಜ್ಯದ ಮೊದಲ ರೈಲ್ವೆ ಸಚಿವ ಹೆಚ್. ಸಿ ದಾಸಪ್ಪ



ರಾಷ್ಟ್ರಪತಿ ರಾಧಾಕೃಷ್ಣನ್ ಅವರಿಂದ ಕೇಂದ್ರ ನೀರಾವರಿ ಸಚಿವರಾಗಿ ಲೋಕ ಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹೆಚ್. ಸಿ. ದಾಸಪ್ಪ



ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ನೆಹರು ಅವರನ್ನು ಬರಮಾಡಿಕೊಂಡ ಅಂದಿನ ರಾಜ್ಯಪಾಲ ಹಾಗೂ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರೊಂದಿಗೆ ಹೆಚ್. ಸಿ. ದಾಸಪ್ಪ



ಕೇಂದ್ರ ಕಾರ್ಮಿಕ ಸಚಿವರಾಗಿ ಕೀನ್ಯ ದೇಶಕ್ಕೆ ಭೇಟಿ ನೀಡಿದ್ದಾಗ
ಅಲ್ಲಿನ ಅಧ್ಯಕ್ಷರೊಂದಿಗೆ ಹೆಚ್ ಸಿ ದಾಸಪ್ಪ .



1939ರಲ್ಲಿ ಹತ್ಯಾಕಾಂಡ ನಡೆದ ಅಂದಿನ ಮೈಸೂರು ಪ್ರಾಂತ್ಯದ
ವಿಧುರಾಶ್ವಥದಲ್ಲೇ ಕಾಂಗ್ರೆಸ್ ಎರಡನೇ ಅಧಿವೇಶನ ನಡೆಸಿದ
ಸಂದರ್ಭದಲ್ಲಿ ಸಮ್ಮೇಳನ ಅಧ್ಯಕ್ಷ ಹೆಚ್. ಸಿ. ದಾಸಪ್ಪ ಅವರನ್ನು
ಕುದುರೆ ಮೇಲೆ ಮೆರವಣಿಗೆ ಮಾಡಿ ಕರೆತರುತ್ತಿರುವುದು.



ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರೀ ಅವರೊಂದಿಗೆ
ಹೆಚ್. ಸಿ. ದಾಸಪ್ಪ



ಕೇಂದ್ರ ನೀರಾವರಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ
ನಂತರ ರಾಷ್ಟ ಪತಿ ರಾಧಾ ಕೃಷ್ಣನ್ ಅವರಿಗೆ ಹಸ್ತ ಲಾಘವ
ಮಾಡುತ್ತಿರುವ ಹೆಚ್ ಸಿ ದಾಸಪ್ಪ .




ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಅವರೊಂದಿಗೆ
ಕೇಂದ್ರ ಸಚಿವರಾದ ಹೆಚ್ ಸಿ ದಾಸಪ್ಪ



1966ರ ಅಕ್ಟೋಬರ್.28ರಂದು ನಿಧನರಾದ ಎಚ್ ಸಿ ದಾಸಪ್ಪ
ಅವರ ಪಾರ್ಥಿವ ಶರೀರ.



ಹೆಚ್ ಸಿ ದಾಸಪ್ಪ ಪಾರ್ಥಿವ ಶರೀರಕ್ಕೆ
ಅಂತಿಮ ನಮನ ಸಲ್ಲಿಸುತ್ತಿರುವ ಪ್ರಧಾನಿ
ಶಾಸ್ತ್ರೀ, ಉಪ ರಾಷ್ಟ್ರಪತಿ ಝಕೀರ್ ಹುಸೇನ್
ಮತ್ತಿತರ ಗಣ್ಯರು





ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ

ಬೆಳೆದು ಬಂದ ಹಾದಿ

ಹೆಚ್. ಸಿ. ದಾಸಪ್ಪನವರು (ಜನನ 1894 ಡಿಸೆಂಬರ್ 5 . ನಿಧನ 1964ರ ಅಕ್ಟೊಬರ್ 28) ಮೈಸೂರು ಪ್ರಾಂತ್ಯದಲ್ಲಿ ಅಪ್ರತಿಮ ಸಮಾಜ ಸುಧಾರಕರು ಆಡಳಿತಗಾರರು ಎಂದೇ ಹೆಸರಾಗಿದ್ದರು. ಇವರ ತಂದೆ ನ್ಯಾಯಾಧೀಶ ರಾವ್ಬಹದ್ದೂರ್ ಹೆಚ್.ಚೆನ್ನಯ್ಯ ಅವರು ಕರ್ನಾಟಕದ ಮೊದಲ ಪ್ರಾದೇಶಿಕ ಪಕ್ಷ 'ಪ್ರಜಾಮಿತ್ರ ಮಂಡಳಿ' ಸಂಸ್ಥಾಪಕ ಅಧ್ಯಕ್ಷರು. ಇವರ ನೇತೃತ್ವದಲ್ಲೆ ಮೈಸೂರು ಸಂಸ್ಥಾನದಲ್ಲಿ ದಲಿತರನ್ನೂ ಒಳಗೊಂಡ ಹಿಂದುಳಿದವರ್ಗಗಳ ಚಳವಳಿ ನಡೆದು 1918ರಲ್ಲಿ ಹಿಂದುಳಿದ ವರ್ಗಕ್ಕೆ ಪ್ರಥಮ ಬಾರಿಗೆ ಮೀಸಲಾತಿ ಜಾರಿಗೆ ಬಂದಿತ್ತು. ದೇಶದಲ್ಲೇ ಮೊದಲ ಬಾರಿ ಜಾರಿಗೆ ತಂದ ದಲಿತರನ್ನೊಳಗೊಂಡ ಹಿಂದುಳಿದವರ್ಗಗಳ ಮೀಸಲಾತಿ ಜಾರಿಗೆ ತರುವುದನ್ನು ವಿರೋಧಿಸಿ ಅಂದಿನ ದಿವಾನರಾದ ಸರ್.ಎಂ.ವಿಶ್ವೇಶ್ವರಯ್ಯನವರು ರಾಜಿನಾಮೆ ಕೊಟ್ಟು ಹೊರನಡೆದಿದ್ದು ಇತಿಹಾಸದಲ್ಲಿ ನಡೆದಿರುವ ಘಟನೆ .

ನ್ಯಾಯಾಧೀಶ ರಾವ್ಬಹದ್ದೂರ್ ಹೆಚ್.ಚೆನ್ನಯ್ಯ ಅವರ ಮಕ್ಕಳೇ 'ರಾವ್ ಬಹದ್ದೂರ್' ಹೆಚ್.ಸಿ.ಜವರಯ್ಯ ಮತ್ತು 'ಮೈಸೂರು ಗಾಂಧಿ' ಹೆಚ್.ಸಿ.ದಾಸಪ್ಪ. 'ರಾವ್ ಬಹದ್ದೂರ್' ಹೆಚ್.ಸಿ.ಜವರಯ್ಯ (ಕ್ರಿ.ಶ.1889–1946) ಮೈಸೂರು ರಾಜ ಸಂಸ್ಥಾನದ ತೋಟಗಾರಿಕೆ ಇಲಾಖೆಯ ಮೊದಲ ಭಾರತೀಯ ನಿರ್ದೇಶಕರು . ಕಾಶ್ಮೀರದಲ್ಲಿ ಅಲ್ಲಿನ ಜನರಿಗೆ ಸೇಬು ಬೆಳೆಯುವುದನ್ನು ಕಲಿಸಿಕೊಟ್ಟ ಖ್ಯಾತಿ ಇವರಿಗಿದೆ . ಹಾಗೇ 'ಮೈಸೂರು ಗಾಂಧಿ' ಹೆಚ್.ಸಿ.ದಾಸಪ್ಪನವರು ವಕೀಲರಾಗಿ ತಂದೆಯ ಮಾರ್ಗದರ್ಶನದಂತೆ 'ಪ್ರಜಾಮಿತ್ರ ಮಂಡಳಿ' ಪಕ್ಷದಿಂದ ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ, 1937ರಲ್ಲಿ ಪ್ರಜಾ ಸಂಯುಕ್ತಪಕ್ಷ ಕಾಂಗ್ರೆಸ್ ಪಕ್ಷದಲ್ಲಿ ವಿಲೀನವಾದ



ನಂತರ, ಕ್ರಿ.ಶ. 1938ರಲ್ಲಿ ನಡೆದ ವಿಧುರಾಶ್ವಥದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದವರು. ಸ್ವಾತಂತ್ರ್ಯ ಹೋರಾಟಗಾರರಾಗಿ ಹಾಗೂ ಗಾಂಧೀಜಿ-ಕಸ್ತೂರ್ ಬಾ ಮತ್ತು ಜವಹರ್ಲಾಲ್ ನೆಹರು ಒಡನಾಡಿಗಳಾಗಿದ್ದವರು. ಕಾಂಗ್ರೆಸ್ ಅಧ್ಯಕ್ಷರೇ ಮುಖ್ಯಮಂತ್ರಿ ಆಗಬೇಕೆಂಬ ಪಕ್ಷದ ನಿಲುವಿಗೆ ಬದ್ಧರಾಗಿ ಕೆ.ಸಿ.ರೆಡ್ಡಿ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟು, ಮೈಸೂರು ರಾಜ್ಯದ ಮೊದಲ ಹಣಕಾಸು ಮತ್ತು ಕೈಗಾರಿಕಾ ಸಚಿವರಾದರು.

ಇವರು ಮುಂದೆ ಜವಹರ್ಲಾಲ್ ನೆಹರು ಸಚಿವ ಸಂಪುಟದಲ್ಲಿ ರೇಲ್ವೆ, ಲಾಲ್ ಬಹದ್ದೂರ್ ಶಾಸ್ತ್ರೀಯವರ ಸಂಪುಟದಲ್ಲಿ ನೀರಾವರಿ ಮತ್ತು ಕೈಗಾರಿಕಾ ಸಚಿವರಾದರು. ಲೋಕಸಭೆಯ ಅಂದಾಜು ಸಮಿತಿ ಅಧ್ಯಕ್ಷರಾಗಿ, ಲೋಕಸಭೆಯಲ್ಲಿ ನೆಹರೂ ನಂತರದ ಸಂಸದೀಯ ಉಪನಾಯಕರಾಗಿದ್ದರು. ಭಾರತದ ಮೊದಲ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಶಾಲಾ ಸಹಪಾಠಿಯಾಗಿದ್ದ ಹೆಚ್.ಸಿ.ದಾಸಪ್ಪನವರು ಬೆಂಗಳೂರಿನ ಜಯನಗರ-ರಾಜಾಜಿನಗರ ಬಡಾವಣೆಯ ನಿರ್ಮಾಣಕರ್ತರು. ಕೇಂದ್ರ ಕೈಗಾರಿಕಾ ಮಂತ್ರಿಯಾಗಿ ಎಂ.ಆರ್.ಎಫ್.ಟೈರ್ಸ್ ಕಾರ್ಖಾನೆಯನ್ನು ಅಭಿವೃದ್ಧಿಗೊಳಿಸಿದವರು.

ಇಂಥ ಉದಾತ್ತ ನಾಯಕರಾದ ಹೆಚ್.ಸಿ.ದಾಸಪ್ಪನವರು ಕ್ರಿ.ಶ.1964ರ ಅಕ್ಟೋಬರ್.28ರ ರಾತ್ರಿ ದೆಹಲಿಯಲ್ಲಿ ನಿಧನರಾದರು. ಹೆಚ್.ಸಿ.ದಾಸಪ್ಪನವರು ರಾಜಕೀಯ ಸೇವೆಯೇ ಹೊರತು, ಸ್ವಾರ್ಥ ಲಾಭಕ್ಕಲ್ಲ ಅನ್ನೋ ನೀತಿಯನ್ನು ಸದಾ ಪಾಲಿಸುತ್ತಿದ್ದರು. ಸಿಹಿ ತಿಂಡಿಗೆ ಕ್ರಿಮಿಗಳು ಮುತ್ತಿಗೆ ಹಾಕುವಂತೆ, ಅಧಿಕಾರದ ಸವಿಗೆ ದುರ್ಜನರು ರಾಜಕೀಯ ಬಯಸಿ ಬರುತ್ತಾರೆ. ಇವರನ್ನು ತಡೆಗಟ್ಟಿ ಸಜ್ಜನರು ರಾಜಕೀಯದಲ್ಲಿ ಉಳಿದು ಬೆಳೆಯಬೇಕು. ಇಲ್ಲದಿದ್ದರೆ, ಭ್ರಷ್ಟಾಚಾರ-ಸ್ವಜನ ಪಕ್ಷಪಾತ ಹೆಚ್ಚಿ ರಾಜಕೀಯ ವ್ಯವಸ್ಥೆ ಹಾಳಾಗುತ್ತದೆ. ರಾಜಕೀಯ ಹಾಳಾದರೆ, ಇಡೀ ದೇಶವೇ ಹಾಳಾಗುತ್ತೆ ಅಂತ ಪ್ರತಿಪಾದಿಸುತ್ತಿದ್ದರು.

ಹೆಚ್.ಸಿ.ದಾಸಪ್ಪನವರ ಇಂಥ ಉತ್ತಮ ವಿಚಾರಧಾರೆಗಳು ಎಲ್ಲರಿಗೂ ತಿಳಿಯಬೇಕೆಂದು ಮೊದಲು ಯೋಚಿಸಿದವರು ಮೈಸೂರಿನ ಏಕೈಕ ಹ್ಯಾಟ್ರಿಕ್ ಲೋಕಸಭಾ ಸದಸ್ಯರು ಹಾಗು ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷರೂ ಆದ ಅವರ ಮಗ ಎಚ್.ಡಿ.ತುಳಸಿದಾಸ್. ಆದರೆ ಯಾವ ರೀತಿ ತಂದೆಯವರ ರಾಜಕೀಯ ಆದರ್ಶ ವಿಚಾರಧಾರೆಗಳನ್ನು ಜನರಿಗೆ ತಲುಪಿಸಬೇಕೆಂದು ಯೋಚಿಸುತ್ತಿದ್ದಾಗ, ಇದಕ್ಕೆ ಉತ್ತಮ ಸಲಹೆ ನೀಡಿದ್ದು ಎಚ್.ಡಿ.ತುಳಸಿದಾಸ್ ಅವರ ತಾಯಿ ಶ್ರೀಮತಿ ಯಶೋಧರ ದಾಸಪ್ಪ.

ಹೆಚ್.ಸಿ.ದಾಸಪ್ಪನವರ ಪತ್ನಿ ಶ್ರೀಮತಿ ಯಶೋಧರ ದಾಸಪ್ಪ ಕರ್ನಾಟಕದ ಕಸ್ತೂರ್ಬಾ ಎಂದೇ ಖ್ಯಾತರಾದವರು. 'ಉಕ್ಕಿನಮಹಿಳೆ' ಅಂತ ಕರೆಸಿಕೊಳ್ಳುತ್ತಿದ್ದ ಶ್ರೀಮತಿ ಯಶೋಧರ ದಾಸಪ್ಪ 1937ರ "ಶಿವಪುರ ಧ್ವಜ ಸತ್ಯಾಗ್ರಹ"ದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರ ನೇತೃತ್ವ ವಹಿಸಿದ್ದವರು . 1948ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷೆಯಾಗಿ ಆಯ್ಕೆಯಾದ ಮೊದಲ ಮಹಿಳೆ ಅನ್ನಿಸಿಕೊಂಡವರು. 1962ರಲ್ಲಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಸಂಪುಟದಲ್ಲಿ ಸಂಪುಟ ದರ್ಜೆ ಸಚಿವೆಯಾಗಿ, ರಾಜ್ಯದ ಮೊದಲ ಮಹಿಳಾ ಸಚಿವೆ ಎನ್ನಿಸಿಕೊಂಡವರು. 1966ರಲ್ಲಿ ಅಂದಿನ ಹಣಕಾಸು ಸಚಿವ ರಾಮಕೃಷ್ಣಹೆಗಡೆಯವರು ಪಾನ ನಿರೋಧ ಜಾರಿಯಲ್ಲಿದ್ದ ತುಮಕೂರು ಮತ್ತಿತರ ಜಿಲ್ಲೆಗಳಲ್ಲಿ ಸರ್ಕಾರಿ ಸಾರಾಯಿ ಸರಬರಾಜು ಮಾಡುವ ಪ್ರಸ್ತಾಪ ವಿರೋಧಿಸಿ, ಸಂಪುಟ ಸಭೆಯಲ್ಲೇ ರಾಜಿನಾಮೆ ಕೊಟ್ಟು ಹೊರಬಂದವರು. ಗಾಂಧೀಜಿ ಅವರ ಪಾನ ನಿರೋಧ ಜಾರಿಗೊಳಿಸುವವರೆಗೂ ವಿಧಾನಸಭೆ ಮೆಟ್ಟಿಲು ತುಳಿಯುವುದಿಲ್ಲ ಎಂದು ಶಪಥ ಮಾಡಿ ರಾಜಕೀಯ ಸನ್ಯಾಸ ಸ್ವೀಕರಿಸಿದ್ದರು. 1972ರಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಶ್ರೀಮತಿ ಯಶೋಧರ ದಾಸಪ್ಪ ನೀಡಿದ ಶಿಫಾರಸ್ಸಿನ ಮೇರೆಗೆ ಡಿ.ದೇವರಾಜ ಅರಸು ಅವರನ್ನು ಮುಖ್ಯಮಂತ್ರಿಯನ್ನಾಗಿಸಿದರು . ಇದನ್ನು ಕೊನೆಗಾಲದವರೆಗೂ ಡಿ.ದೇವರಾಜ ಅರಸು ಅವರು ಕೃತಜ್ಞತೆಯಿಂದ ಸ್ಮರಿಸುತ್ತಿದ್ದರು.

ಗಾಂಧೀಜಿ ಸ್ಥಾಪಿಸಿದ 'ಕಸ್ತೂರ್ ಬಾ ಟ್ರಸ್ಟ್'ನ ಮೈಸೂರು ಪ್ರಾಂತ್ಯದ ಮೊದಲ ಅಧ್ಯಕ್ಷೆಯಾಗಿ ಸಲ್ಲಿಸಿದ ಅನುಪಮ ಸೇವೆ ಮತ್ತು ವಿನೋಬಾ ಭಾವೆ ಅವರ ಭೂದಾನ ಚಳವಳಿಗೆ ಪೂರಕವಾಗಿ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ನೂರಾರು ಎಕರೆ ಜಮೀನು ಖರೀದಿಸಿ ಹಂಚಿ, ನೂರಾರು ಮನೆಗಳನ್ನು ಕಟ್ಟಿಸಿಕೊಟ್ಟ ಅನುಪಮ ಸೇವೆಗಾಗಿ 1973ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದಿದ್ದರು. ಶ್ರೀಮತಿ ಯಶೋಧರ ದಾಸಪ್ಪ ಅವರ ತಂದೆ ಕೆ.ಹೆಚ್.ರಾಮಯ್ಯ . ರಾಜ್ಯ ಒಕ್ಕಲಿಗರ ಸಂಘ ಸ್ಥಾಪಿಸಿ, ಮತ್ತು ದಿವಾನ್ ವಿಶ್ವೇಶ್ವರಯ್ಯನವರ ವಿರೋಧ ಲೆಕ್ಕಿಸದೆ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ಜಾರಿಗೊಳ್ಳಲು ಕಾರಣಕರ್ತರಾದ ಕೆ.ಹೆಚ್.ರಾಮಯ್ಯನವರು 1921ರಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿ 'ಆದಿಕರ್ನಾಟಕ ಸಂಘ' 'ಕುರುಬರ ಸಂಘ' ಮತ್ತಿತರ ಹಿಂದುಳಿದವರ್ಗಗಳ ಸಂಘ ಸ್ಥಾಪನೆಗೆ ನೆರವಾಗಿದ್ದರು.

ಇಂಥ ಸಾಮಾಜಿಕ ಕಾಳಜಿಯ ವ್ಯಕ್ತಿಗಳ ಮೂರನೇ ತಲೆಮಾರಿನವರಾದ ಹೆಚ್.ಡಿ.ತುಳಸೀದಾಸ್ ತಂದೆ-ತಾಯಿ ಮತ್ತು ಅಜ್ಜ-ಅಜ್ಜಿಯರಂತೆ ವಿದ್ಯಾವಂತರಾಗಿ ಸಮಾಜಮುಖಿ ಚಿಂತಕ ರಾಜಕಾರಣಿಯಾಗಿದ್ದರು. 1972ರಲ್ಲಿ ಎರಡನೇ ಬಾರಿ ಮೈಸೂರು ಲೋಕಸಭಾ ಸದಸ್ಯರಾಗಿದ್ದ ಎಚ್.ಡಿ.ತುಳಸಿದಾಸ್ ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ದೇಶಾದ್ಯಂತ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಇಂಥ ಸಂದರ್ಭದಲ್ಲಿ ಒಂದು ದಿನ ಪತ್ನಿ ಶ್ರೀಮತಿ ಸರೋಜ ತುಳಸಿದಾಸ್ ಅವರಿಗೆ ಒಂದು ಯೋಚನೆ ಹೊಳೆಯಿತು. ತಮ್ಮ ಮಾವ ಹೆಚ್.ಸಿ.ದಾಸಪ್ಪನವರ ರಾಜಕೀಯ-ಸಾಮಾಜಿಕ ಅಭಿವೃದ್ಧಿಯ ವಿಚಾರಧಾರೆಗಳು ಜನರಿಗೆ ತಲುಪಿಸಲು ಒಂದು ಸಂಸ್ಥೆ ಸ್ಥಾಪಿಸಬೇಕೆಂದು ಯೋಚಿಸಿದರು. ಅದನ್ನು ಕರ್ನಾಟಕದ ಮೊದಲ ಮಹಿಳಾ ಸಚಿವೆಯೂ ಆದ ಅತ್ತೆ ಶ್ರೀಮತಿ ಯಶೋಧರಾ ದಾಸಪ್ಪರಿಗೆ ತಿಳಿಸಿದರು. ಮಹಾತ್ಮ ಗಾಂಧಿ ಒಡನಾಡಿಯಾದ ಹೆಚ್.ಸಿ.ದಾಸಪ್ಪನವರ ರಾಜಕೀಯ-ಸಾಮಾಜಿಕ ಅಭಿವೃದ್ಧಿಯ ವಿಚಾರಧಾರೆಗಳು ಜನರಿಗೆ ತಲುಪಿಸಲು ಒಂದು ವಿಚಾರ ಸಂಸ್ಥೆ ಸ್ಥಾಪಿಸುವುದು

ಸೂಕ್ತ ಅನ್ನಿಸಿತು. ಇದನ್ನು ಎಚ್.ಡಿ.ತುಳಸಿದಾಸ್ ಅವರ ಪತ್ನಿ ಶ್ರೀಮತಿ ಸರೋಜ ತುಳಸಿದಾಸ್ ಅವರು ಸಾಹಿತಿಗಳು ತಮ್ಮ ಕುಟುಂಬದ ಹಿತೈಷಿಗಳೂ ಆದ ಪ್ರೊ.ಪ್ರಾಣೇಶ್ ರಾವ್ ಬಳಿ ಚರ್ಚಿಸಿದಾಗ ಮತ್ತಷ್ಟು ರೂಪ ಪಡೆಯಿತು. ದೆಹಲಿ ಪ್ರವಾಸ ಮುಗಿಸಿ ಮೈಸೂರಿನ ಮನೆಗೆ ಬಂದ ಎಚ್.ಡಿ.ತುಳಸಿದಾಸ್ ಅವರಿಗೆ ವಿಚಾರ ತಿಳಿಸಿದಾಗ ಬಹಳ ಸಂತೋಷಪಟ್ಟು "ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ" ಅಥವ "ಎಚ್.ಸಿ.ದಾಸಪ್ಪ ಇನ್ಸಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ " ಎಂಬ ಸಂಸ್ಥೆ ರೂಪ ತಳೆಯಿತು.

ಈ ಸಾರ್ವಜನಿಕ ಸಂಸ್ಥೆಯ ಉದ್ಘಾಟನಾ ಸಮಾರಂಭ 1974ರಲ್ಲಿ ಮೈಸೂರಿನ ಪುರಭವನದಲ್ಲಿ ನಡೆಯಿತು. ಕಿಕ್ಕಿರಿದು ನೆರೆದಿದ್ದ ಭವ್ಯ ಸಮಾರಂಭದಲ್ಲಿ ಅಂದಿನ ರಾಷ್ಟ್ರಪತಿ ವಿ.ವಿ.ಗಿರಿ ಸಂಸ್ಥೆಯನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಿದರು. ಸಮಾರಂಭದಲ್ಲಿ ಅಂದಿನ ರಾಜ್ಯಪಾಲ ಮೋಹನ್ಲಾಲ್ ಸುಖಾಡಿಯಾ ಮತ್ತಿತರ ರಾಜಕೀಯ ಗಣ್ಯರು ಭಾಗವಹಿಸಿದ್ದರು. ಸಮಾರಂಭದ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದವರು ಮೈಸೂರಿನವರೆ ಆದ ಅಣು ವಿಜ್ಞಾನಿ ಡಾ.ರಾಜಾರಾಮಣ್ಣ. ಆಗಷ್ಟೆ, ಭಾರತ ಅಣು ಬಾಂಬ್ ಪರೀಕ್ಷಿಸಿ ಅಣು ಶಕ್ತ ರಾಷ್ಟ್ರ ಎನಿಸಿತ್ತು .

ದೇಶದ ಏಳಿಗೆಗೆ ಸಮಾಜಮುಖಿಯಾಗಿ ರೂಪ ತಾಳಿದ "ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ" ಅಥವ "ಎಚ್.ಸಿ.ದಾಸಪ್ಪ ಇನ್ಸಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ಸಂಸ್ಥೆಗೆ 1976ರಲ್ಲಿ ಅಂದಿನ ನಗರ ವಿಶ್ವಸ್ಥ ಮಂಡಳಿ ಮೈಸೂರಿನ ತೊಣಚಿಕೊಪ್ಪಲಿನ ಮಾರುತಿ ಮಂದಿರ ರಸ್ತೆಯಲ್ಲಿ ನಾಗರೀಕ ಉದ್ದೇಶದ ನಿವೇಶನವನ್ನು ನೀಡಿತು. ಅಲ್ಲೀಗ "ಹೆಚ್.ಸಿ.ದಾಸಪ್ಪ"ಭವನ ನಿರ್ಮಿಸಿ ಅವರ ವಿಚಾರಧಾರೆಗಳನ್ನು ಇಂದಿನ ರಾಜಕೀಯ ಪೀಳಿಗೆಗೆ ತಿಳಿಸಲು ಉದ್ದೇಶಿಸಿಲಾಗಿದೆ . ಭವನ ನಿರ್ಮಾಣಕ್ಕೆ ರಾಜ್ಯ ಸರ್ಕಾರ 50ಲಕ್ಷ ರುಪಾಯಿ ಅನುದಾನ ನೀಡಿದೆ. ಇದರ ಜೊತೆ ದಾನಿಗಳ ನೆರವು ಪಡೆದು ವಿಸ್ತಾರಿತ ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ.

ಚಿತ್ರಗಳು ಮತ್ತು ಲೇಖನ :
ಎಸ್ .ಪ್ರಕಾಶ್ ಬಾಬು

■

STATEMENT ABOUT OWNERSHIP AND OTHER PARTICULARS ABOUT BAAPU PRAPANCHA

FORM IV Rule 8

1. Place of Publication : Bengaluru

2. Periodicity of Publication : Monthly

3. Printer Name : **Printastic**
   Nationality : Indian
   Address : 272, 2nd Main Road, 6th Cross, Lavakushanagar, Laggere Bangalore-58
   Ph : +91 9886747417
   E-mail : printastic.21@gmail.com

4. Publishers Name : **M C Narendra**
   Nationality : Indian
   Address : **Karnataka Gandhi Smaraka Nidhi**
   Gandhi Bhavana, Kumara Park East Bangalore - 560 001

5. Editor's Name : **N R Vishukumar**
   Nationality : Indian
   Address : **Karnataka Gandhi Smaraka Nidhi**
   Gandhi Bhavana, Kumara Park East Bangalore - 560 001

6. License No. - Regd. No.
   KARBIL/2019/77950

I, M C Narendra - hereby declare that the particulars given above are true to the best of my knowledge and belief.

Bengaluru
15.03.2024

Sd.
Secretary
Signature of the Publisher



ದುರಾಸೆಯೆಂಬ ಭಸ್ಮಾಸುರ

ಸಿ. ಯು. ಬೆಳ್ಳಕ್ಕಿ

ನೆಲ, ಜಲ, ಆಗಸ, ಗಿಡಮರ, ಪ್ರಾಣಿ ಪಕ್ಷಿ ಎಲ್ಲನೈಸರ್ಗಿಕ ಸಂಪನ್ಮೂಲಗಳು ನಮ್ಮ ದುರಾಸೆಗೆ ಬಲಿಯಾಗುತ್ತಿವೆ. ಪೈಪೋಟಿಗೆ ಬಿದ್ದವರಂತೆ ನಿರಂತರವಾಗಿ ಇವುಗಳನ್ನು ಕೊಳ್ಳೆಹೊಡೆಯುವುದನ್ನು ನೋಡಿದಾಗ, ಕೇಳಿದಾಗ ದಿಗ್ಭ್ರಮೆಯುಂಟಾಗುತ್ತದೆ. ಪರಿಸರ ವಿನಾಶದತ್ತ ಸಾಗುತ್ತಿದೆ. ಏನಾದರೂ ಮಾಡಿ ಸಿಕ್ಕ ಸಿಕ್ಕ ವಸ್ತುಗಳನ್ನು ಸಿಕ್ಕಸಿಕ್ಕಷ್ಟು ಖರೀದಿಸಬೇಕೆಂಬ ಕೊಳ್ಳುಬಾಕ ಸಂಸ್ಕೃತಿ, ಯಾವದೇ ಮಾರ್ಗದಿಂದ ಹಣಗಳಿಸಬೇಕೆಂಬ ಭ್ರಷ್ಟ ನಿರ್ಲಜ್ಜ ಜನರ ಹಪಾಪಿ ಕಳವಳಕಾರಿ. ಭ್ರಷ್ಟಾಚರ, ಹಿಂಸೆ, ಶೋಷಣೆ, ಸಾಲದ ಬವಣೆ ಇವೆಲ್ಲವುಗಳ ಮೂಲ ದುರಾಸೆ. ಈ ದುರಾಸೆಯಿಂದ ಕುಟುಂಬ, ರಾಜ್ಯ, ದೇಶಗಳು ಆರ್ಥಿಕ, ಸಾಮಾಜಿಕ ದಿವಾಳಿಯೆತ್ತ ಸಾಗುತ್ತಿವೆ. ವಿಶ್ವ ಅಳಿವಿನಂಚಿಗೆ ಬಂದು ನಿಲ್ಲುವಂತಾಗಿದೆ.

ವಿಶ್ವದಲ್ಲಿ ಪ್ರತಿನಿಮಿಷ 2,400 ಹಾಗೂ ಪ್ರತಿವರ್ಷ ಒಂದು ಸಾವಿರಕೋಟಿಗೂ ಹೆಚ್ಚು ಮರಗಳ ಮಾರಣ ಹೋಮ ನಡೆಯುತ್ತಿದೆ. ಭಾರತದಲ್ಲಿ ಕಳೆದ 30 ವರ್ಷಗಳಲ್ಲಿ ಅರಣ್ಯನಾಶ ಗಂಭೀರ ಸ್ಥಿತಿ ತಲುಪಿದೆ. ವಿಶ್ವದಲ್ಲಿ ಪ್ರತಿದಿನ 150 ಹಾಗೂ ಪ್ರತಿವರ್ಷ ಹತ್ತು ಸಾವಿರದಿಂದ ಒಂದು ಲಕ್ಷ ಸಸ್ಯ ಹಾಗೂ ಪ್ರಾಣಿ ಪಕ್ಷಿ ಸಂಕುಲ ಕಣ್ಮರೆಯಾಗುತ್ತಿರುವುದು ಮಾನವನ ದುರಾಸೆಯ ಕರಾಳತೆಯ ಪ್ರತಿಕವಾಗಿದೆ. ಇವೆಲ್ಲವುಗಳ ಪ್ರತಿಫಲ ಹವಾಮಾನ ವೈಪರೀತ್ಯ, ಮಣ್ಣು ಸವಕಳಿ, ಬರಡು ಭೂಮಿ, ಪ್ರವಾಹ, ಭೂಕಂಪ, ಸೈಕ್ಲೋನ್ ಅಂತಹ ಪ್ರಕೃತಿ ವಿಕೋಪಗಳು. ಟ್ರಕ್ಕುಗಳಲ್ಲಿ ತುಂಬಿ ನಿಲ್ಲಿಸಿದರೆ ಇಡಿ ವಿಶ್ವವನ್ನು 24 ಸಲ ಸುತ್ತುಹಾಕುವಷ್ಟು ನಮ್ಮಿಂದ ಉತ್ಪನ್ನವಾಗುವ ಎರಡು ನೂರು ಕೋಟಿ ತ್ಯಾಜ್ಯ ಇಡೀ ವಿಶ್ವವನ್ನೇ ತಿಪ್ಪೆಯಾಗಿಸಿದಂತಿದೆ. ಭೂಮಿಯ ಸಂಪನ್ಮೂಲಗಳನ್ನು ಮನಬಂದಂತೆ ಲೂಟಿ ಮಾಡಿ, ಅದೂ ಸಾಲದೆಂಬಂತೆ ಇನ್ನುಳಿದ ಗ್ರಹಗಳಲ್ಲಿ ಇರುವ ಸಂಪನ್ಮೂಲಗಳನ್ನು ಮುಕ್ಕಿಹಾಕಲು ಹಾತೊರೆಯುತ್ತಿರುವುದು ಆಘಾತಕಾರಿ ಸಂಗತಿಯಾಗಿದೆ.

ಹಾಗಾದರೆ ಈ ಸಮಸ್ಯೆಗೆ ಪರಿಹಾರವೇ ಇಲ್ಲವೆ ? ಖಂಡಿತ ಇದೆ. ಸರಳತೆ, ಪ್ರಾಮಾಣಿಕತೆಯನ್ನು ಬೋಧಿಸಿ ಅದನ್ನು ಆಚರಣೆಯಲ್ಲಿ ತಂದ ಮಹಾತ್ಮಾಗಾಂಧಿ ಈ ಪ್ರಶ್ನೆಗೆ ಉತ್ತರವಾಗಿದ್ದಾರೆ. ಈ ದಿಸೆಯಲ್ಲಿ ಅವರು ಇಂದಿಗೂ ಪ್ರಸ್ತುತವಾಗಿದ್ದಾರೆ. 'ಪ್ರತಿಯೊಬ್ಬನ ಅವಶ್ಯಕತೆ ಈಡೇರಿಸುವಷ್ಟು ಭೂಮಿಯಲ್ಲಿದೆ. ಆದರೆ ದುರಾಸೆ ಈಡೇರಿಕೆಯಷ್ಟು ಅಲ್ಲ' ಎಂಬ ಗಾಂಧೀಜಿ ಮಾತು ಮಾರ್ಮಿಕ ಮತ್ತು ಸರ್ವಕಾಲಿಕ. ಆಶೆಯೇ ದುಃಖಕ್ಕೆ ಮೂಲ ಎಂದು ಹೇಳಿದ ಬುದ್ಧನ ಮಾತನ್ನು ಕಟ್ಟುನಿಟ್ಟಾಗಿ ಅವರು ಆಚರಣೆಯಲ್ಲಿ ತಂದರು. ಇದು ಗಾಂಧಿ ನಮ್ಮ ದೇಶಕ್ಕಷ್ಟೆ ಅಲ್ಲ, ಇಡೀ ವಿಶ್ವಕ್ಕೆ ನೀಡಿದ ಮಹಾನ್ ಕೊಡುಗೆಯಾಗಿದೆ. ಸರಳ ಜೀವನ ಹಾಗು ಉನ್ನತ ಯೋಚನೆಯ ಯಶಸ್ವಿ ಪ್ರಯೋಗಗಳಿಂದ ಗಾಂಧೀಜಿ ಸುಸ್ಥಿರ ಅಭಿವೃದ್ಧಿಗೆ ಇಂದಿಗೂ ಪ್ರಸ್ತುತವಾದ ಮಾದರಿಯನ್ನು ಕಟ್ಟಿಕೊಟ್ಟಿದ್ದಾರೆ. ನಾವೀಗ ಬಳಸುವ ಅಭಿವೃದ್ಧಿ ಪದವನ್ನು ಗಾಂಧೀಜಿ ಇಷ್ಟಪಡುತ್ತಿದ್ದಿಲ್ಲ. ಅವರು ಅದಕ್ಕೆ ಪರ್ಯಾಯವಾಗಿ 'ಅಭ್ಯುದಯ' ಎಂಬ ಪದವನ್ನು ಬಳಸುತ್ತಿದ್ದರು. ಅಭ್ಯುದಯ ಎನ್ನುವ ಪದದಲ್ಲಿ ಕರುಣೆ, ಅನುಕಂಪ ಮತ್ತು ಪೂರ್ತಿಯಾಗಿ ಹಿಂದಿನದನ್ನು ಕಳೆದುಕೊಳ್ಳದ ಪರಂಪರಾ ಪ್ರಜ್ಞೆ ಇದೆ ಎನ್ನುತ್ತಿದ್ದರು.

ಗಾಂಧೀಜಿ ಸರಳತೆಯ ಸಾಕಾರ ಮೂರ್ತಿ. 'ದಿ ಲೈಫ್ ಆಫ್ ಮಹಾತ್ಮಾ ಗಾಂಧಿ' ರಚಿಸಿದ ಖ್ಯಾತ ಇಂಗ್ಲೀಷ್ ಲೇಖಕ, ಚಿಂತಕ ಲುಯಿ ಫಿಷರ್ ಗಾಂಧಿಯವರ ಸರಳ ಜೀವನದಿಂದ ತುಂಬಾ ಪ್ರಭಾವಿತರಾದರು. ತಾನು ಕಂಡ ಗಾಂಧಿ ವ್ಯಕ್ತಿತ್ವ ಹಾಗೂ ವಾಸಸ್ಥಾನ ಹೇಗಿತ್ತು ಎಂದು ಎಳೆಯೆಳೆಯಾಗಿ ಬಿಚ್ಚಿಟ್ಟಿದ್ದಾರೆ. 'ಅಧಿಕಾರ, ಸಂಪತ್ತು, ಅಹಂಕಾರಗಳ ವಿನಾಷ, ಪ್ರಭಾವವನ್ನು ತಡೆಯುವವರಿಲ್ಲದ ಜಗತ್ತಿನಲ್ಲಿ ಅವನೊಬ್ಬ ಸತ್ಪುರುಷನಾಗಿದ್ದಾನೆ. ವಿದ್ಯುಚ್ಛಕ್ತಿ, ರೇಡಿಯೊ, ಟೆಲಿಫೋನ್, ಫರ್ನಿಚರ್‌ಗಳಿಲ್ಲದ ಮಣ್ಣಿನ ಗುಡಿಸಿಲಿನಲ್ಲಿ ಅರೆಬೆತ್ತಲೆಯಾಗಿ ಆತ ಕುಳಿತಿದ್ದನು. ಆತನು ಸಂಪೂರ್ಣ ಮಣ್ಣಿಗೆ ಸೇರಿದ್ದನು. ಗಾಂಧಿ ಬಲಶಾಲಿ. ಆತನ ಶಕ್ತಿ ವ್ಯಕ್ತಿ–ಸಂಪತ್ತಿನಲ್ಲಿತ್ತೇ ಹೊರತು, ಆರ್ಥಿಕ ಸಂಪತ್ತಿನಲ್ಲಿರಲಿಲ್ಲ. ಆತನ ಗುರಿ ಬದುಕೇ ಹೊರತು ಸಂಪಾದನೆಯಲ್ಲ.

ಶ್ರಮಜೀವನದಲ್ಲಿ ಗಾಂಧಿ ಇಟ್ಟ ಅಪಾರ ನಂಬುಗೆ ದೈಹಿಕ ದುಡಿಮೆಯನ್ನು ಬಹುದೊಡ್ಡದಾಗಿ ನೆಚ್ಚಿಕೊಂಡ ಪರಿ ಅದ್ಭುತವಾದುದು. ಅವರು ತೋಟದಲ್ಲಿ ಊಳುತ್ತಿದ್ದರು, ನೂಲುತ್ತಿದ್ದರು, ತಮ್ಮ ಬಟ್ಟೆಯನ್ನು ತಾವೇ ಹೊಲಿಯುತ್ತಿದ್ದರು, ಮತ್ತು ಒಗೆಯುತ್ತಿದ್ದರು, ಅಡಿಗೆ ಮಾಡುತ್ತಿದ್ದರು, ಪಾತ್ರೆ ತೊಳೆಯುತ್ತಿದ್ದರು, ಕಸ ಗುಡಿಸುತ್ತಿದ್ದರು. ಶೂಶ್ರೂಸೆ ಮಾಡುತ್ತಿದ್ದರು, ಮರಮುಟ್ಟು ಕೂಡ ತಯಾರಿಸುತ್ತಿದ್ದರು. ತಮ್ಮಪಾಯಖಾನೆಯನ್ನು ತಾವೇ ಸ್ವಚ್ಛಗೊಳಿಸುತ್ತಿದ್ದರು. ಕೂದಲು ಕತ್ತರಿಸುತ್ತಿದ್ದರು. ಚಪ್ಪಲಿ ತಯಾರಿಸುತ್ತಿದ್ದರು. ಪತ್ರಿಕೆಗಳಿಗಾಗಿ ಲೇಖನಗಳನ್ನು ಬರೆಯುತ್ತಿದ್ದರು, ತಮ್ಮದೇ ಮುದ್ರಣಾಲಯದಲ್ಲಿ ಮಳೆ ಜೋಡಿಸುತ್ತಿದ್ದರು. ಗಾಂಧೀಜಿ ಹೀಗೆ ಅನೇಕ ಸಂಗತಿಗಳಲ್ಲಿ ಆಸಕ್ತಿ ವಹಿಸಿದರು. ಮತ್ತು ಆಸಕ್ತಿ ವಹಿಸಿದಾಗ ಅವುಗಳನ್ನು ಪರಿಪೂರ್ಣ ತನ್ಮಯತೆಯಿಂದ ನಿರ್ವಹಿಸಿದ್ದರು. ರಾಜಕೀಯ ಮತ್ತು ಸಾರ್ವಜನಿಕ ಕ್ಷೇತ್ರಗಳ ಹೊರತಾಗಿ ಗಾಂಧೀಜಿ ಹೇಗೆ

ವೈವಿಧ್ಯಪೂರ್ಣ ಚಟುವಟಿಕೆಗಳನ್ನು ನಡೆಸಿದರು ಎನ್ನುವುದು ಅಸಾಧಾರಣವಾದುದು. ಗಡಿಯಾರದ ಮುಳ್ಳುಗಳಷ್ಟೆ ನಿಖರತೆಯಿಂದ ಕಠಿಣ ಪರಿಶ್ರಮದ ದಿನಚರಿಯನ್ನು ಪಾಲಿಸುತ್ತಿದ್ದರು. ಕೆಲಸದ ಮೇಲಣ ಶ್ರದ್ಧೆ ಮತ್ತು ಕಾಯಕ ಸಾಮರ್ಥ್ಯಗಳಿಗಾಗಿ ದಕ್ಷಿಣ ಆಫ್ರಿಕಾದ ಸಹಚರರು ಅವರಿಗೆ 'ಕರ್ಮವೀರ' ಎನ್ನುವ ಬಿರುದನ್ನಿತ್ತು ಗೌರವಿಸಿದರು. ಮಹಾತ್ಮನ ಪರಿಶ್ರಮದ ಜೀವನ ಅನುಪಮ, ಅನುಕರಣೀಯ.

ಇಂಗ್ಲಂಡಿನಂತೆ ನಮ್ಮ ದೇಶವೂ ಅಭಿವೃದ್ಧಿಯಾಗುವುದು ಯಾವಾಗ ? ಎಂದು ಒಮ್ಮೆ ಒಬ್ಬರು ಕೇಳಿದ್ದಕ್ಕೆ ಗಾಂಧಿ ಹೀಗೆ ಹೇಳಿದ್ದರು : 'ಇಂಗ್ಲಂಡಿನ ಅಭಿವೃದ್ಧಿಗೆ ಭೂಮಿಯ ಅರ್ಧ ಸಂಪನ್ಮೂಲಗಳೇ ಬರಿದಾಗಿವೆ. ಭಾರತ ಆ ರೀತಿ ಆಗಬೇಕಾದಲ್ಲಿ ಭೂಮಿಯಂತಹ ಇನ್ನೆಷ್ಟು ಗ್ರಹಗಳು ಬರಿದಾಗಬೇಕೋ ?' ಎಂದಿದ್ದರು. 'ಅಂಥ ಅಭಿವೃದ್ಧಿ ಬೇಡವೇ ಬೇಡ, ಮನುಷ್ಯನ ಆಸೆಗೆ ಕೊನೆಯೇ ಇಲ್ಲ. ತನ್ನ ದುರಾಸೆಯನ್ನು ಈಡೇರಿಸಿಕೊಳ್ಳಲು ಪಶ್ಚಿಮದ ನಾಗರಿಕತೆ ಪ್ರಕೃತಿಯ ಮೇಲೆ ಮೇಲುಗೈ ಸಾಧಿಸಲು ಯತ್ನಿಸುತ್ತಿದೆ ಎಂದು ಗಾಂಧಿಜಿ ನಿಷ್ಠುರವಾಗಿ ಹೇಳಿದ್ದರು.

ಅವರ ಹೇಳಿಕೆ ಇಂದಿಗೂ ಅಕ್ಷರಶಃ ನಿಜವಾಗಿದೆ. ಒಬ್ಬ ಸಾಮಾನ್ಯ ಇಂಗ್ಲೀಷ್ ನಾಗರಿಕನಿಗೆ ಇಂದಿನ ಅವನ ಬಳಕೆಯ ಮಟ್ಟ, ಅದರಿಂದ ಉಂಟಾಗುವ ತ್ಯಾಜ್ಯ ಸಂಗ್ರಹಕ್ಕಾಗಿ ಸುಮಾರು 5 ಹೆಕ್ಟೇರ್ ಭೂಮಿ ಬೇಕಾಗುತ್ತದೆ. ಅಮೇರಿಕನ್ನನಿಗೆ ಅದರ ಎರಡುಪಟ್ಟು ಅಂದರೆ ಹತ್ತು ಹೆಕ್ಟೇರಿನಷ್ಟು ಭೂಮಿ ಬೇಕಾಗುತ್ತದೆ. ಅದರೆ ಪ್ರತಿಯೊಬ್ಬ ಭಾರತಿಯನಿಗೆ ಬೇಕಾಗುವ ಭೂಮಿ 1.67 ಹೆಕ್ಟೇರ ಮಾತ್ರ. ಅಮೇರಿಕೆಯಲ್ಲಿ ಇಂಧನ ಬಳಕೆ ವರ್ಷಕ್ಕೆ 11,267 kwh ಆದರೆ ಭಾರತದಲ್ಲಿ ಅದು 1023 kwh ಆಗಿದೆ. ಕಾರು, ಟ್ರಕ್ಕು, ಬಸ್ಸುಗಳನ್ನೂ ಸೇರಿ ಅಮೇರಿಕೆಯಲ್ಲಿ ಒಟ್ಟು ವಾಹನಗಳ ಸಂಖ್ಯೆ ಪ್ರತಿ ಒಂದು ಸಾವಿರ ಜನರಿಗೆ 906 ಆದರೆ ಭಾರತದಲ್ಲಿ ಅದು 59 ಆಗಿದೆ. ಪ್ರತಿಯೊಬ್ಬನ ಸರಾಸರಿ ಬಳಕೆಗೆ ತಗಲುವ ಖರ್ಚು ಭಾರತದಲ್ಲಿ 4,636 ಡಾಲರ್ ಆದರೆ ಅಮೇರಿಕೆಯಲ್ಲಿ ಅದು 49,931 ಡಾಲರ್. ಜನಸಂಖ್ಯೆಯಲ್ಲಿ ನಂಬರ್ 1 ಆಗಿರುವ ನಮ್ಮ ದೇಶದಲ್ಲಿ ಪ್ರತಿವರ್ಷ 62 ಮಿಲಿಯನ್ ಟನ್ ತ್ಯಾಜ್ಯ ಉತ್ಪನ್ನವಾಗುತ್ತದೆ. ಅಮೇರಿಕೆಯಲ್ಲಿ ಅದು 268 ಮಿಲಿಯನ್ ಟನ್ ಆಗಿದೆ. ಇವೆಲ್ಲ ಅಂಕಿಅಂಶಗಳನ್ನು ಗಮನಿಸಿದಾಗ ಭಾರತೀಯರು ಅಮೇರಿಕನ್ನರ ಉಪಭೋಗ ಜೀವನಶೈಲಿ ಅಳವಡಿಸಿಕೊಂಡಲ್ಲಿ ವಿಶ್ವದ ಎಲ್ಲಾ ಸಂಪನ್ಮೂಲಗಳು ಭಾರತೀಯರಿಗೆ ಮಾತ್ರ ಸಾಕಾಗಬಲ್ಲದು.

ಅಂದು ವಿಷ್ಣುವಿನಿಂದ ಮುಟ್ಟಿದ್ದೆಲ್ಲ ಭಸ್ಮ ಮಾಡುತ್ತಿದ್ದ ಭಸ್ಮಾಸುರನ ಸಂಹಾರದಿಂದ ಭೂಮಂಡಲ, ಕೈಲಾಸಗಳ ರಕ್ಷಣೆ ಸಾಧ್ಯವಾಯಿತು. ಆದರೆ ಇಂದು ಅಂದಿನ ಭಸ್ಮಾಸುರನಿಗಿಂತ ಭಯಂಕರ ಹಾಗೂ ಖತರ್ನಾಕ್ ಆಗಿ ಇಡಿ ಭೂಮಂಡಲವನ್ನೇ ಭಸ್ಮ ಮಾಡಲು ಪಣ ತೊಟ್ಟಂತಿರುವ ದುರಾಸೆಯೆಂಬ ಭಸ್ಮಾಸುರಸನ ಸಂಹಾರ ಅಷ್ಟು ಸುಲಭವಲ್ಲ. ನಾವಿರುವ ಭೂಮಂಡಲದ ಸಂಪತ್ತನ್ನು ನಾವು ನಮ್ಮ ಮುಂದಿನ ಪೀಳಿಗೆಯಿಂದ ಎರವಲು ಪಡೆದಿದ್ದೇವೆ. ಇದು ಸದಾ ನಮ್ಮ ಗಮನದಲ್ಲಿರಬೇಕು, ಅದನ್ನು ಬೇಜವಾಬ್ದಾರಿಯಾಗಿ ದುರಾಸೆಯಿಂದ ದುರ್ಬಳಕೆ ಮಾಡಿದಲ್ಲಿ ನಮ್ಮ ಮುಂದಿನ ಪಿಳಿಗೆಗೆ ಬರಿದಾದ ಬರಡು ಭೂಮಂಡಲ ಮಾತ್ರ ಉಳಿದೀತು. ಇದು ಕರಾಳ ಸತ್ಯ. ಆಸೆಯನ್ನು ನೀಗಿಸಿಕೊಳ್ಳುವುದು ಹೇಗೆ ಎಂದು ಬೋಧಿಸಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸಿ ಮಾದರಿಯಾದ ಗಾಂಧಿಜಿ ಮಾತ್ರ ದುರಾಸೆಯೆಂಬ ಭಸ್ಮಾಸುರನಿಗೆ ಕಡಿವಾಣ ಹಾಕಿ ಈ ಜ್ವಲಂತ ಸಮಸ್ಯೆಗೆ ಉತ್ತರವಾಗಬಲ್ಲರು.

■



My Love for "India Our MotherLand"

- Elaine Munsamy

(Mr. Tiru Munusamy & Elaine Munusamy have recently visited Gandhibhavan. Mr. Tiru munisamy was grandson of mr. Munisamy who was a driver to manilal Gandhi son of Mohan Das karama Chand Gandhi at South Africa . Later, Munisami's son (father of Tiru Munisamy) was with Ila Gandhi at her Durban's Ashrama . Tiru Munisamy is working as a librarian at Natal university in South Africa . Munisamy's forefathers were from Pondicherry in India.)



Mr.Tiru Munsamy & Mrs. Elaine Munsamy of South Africa along with Mr. Wooday P Krishna , chairman, Vishukumar N R , vice chairman & M C Narendra , Honorary secretary, Karnataka Gandhi Smaraka Nidhi at Gandhi Bhavan , Bengaluru.

It had been a dream come true visiting our motherland and touching down in Chennai made me realise it was indeed really happening.

I was filled with mixed emotions at first after being cautioned by several friends & family, about water issues, internal racism and food hygiene, all of which I assure you were never an issue during my trip.

My focus for this trip was to visit the many museums and galleries of "Mahatma Gandhi", which led me to the Gandhi Bhavan, in Bengaluru, Karnataka. My unfortunately short time spent at the memorial museum was nothing less than insightful and interesting. Having seen the "teachings and philosophies of Gandhiji" live through everyone in India, brought a strong sense of pride and peace knowing that the youth and community still have a chance to learn and walk in "Gandhiji's" footsteps.



Mr. Munsamy of South Africa visited Mahatma Gandhi Research & study centre & scanning centre of Servants of knowledge at Gandhi Bhavan . mr. Vishukumar & Karl Malmad of Servants of knowledge briefed about the initiative of Gandhi Bhavan in Digitisation of Gandhian literature & other important old collections .

Seeing the excellent work the "Gandhi Bhavan team" does and the many lives they touch daily was truly gratifying and eye-opening.

Spending time with the Chairman and a few of the Gandhi Bhavan Senior members was most rewarding as they helped me better understand their practices, values and overall aim being "Truth, Compassion and Kindness" and their willingness to assist people from far and wide.

I was fortunate enough to be seen by the naturopathy team, my hour spent with them was truly blissful and relaxing, I arrived with unbearable body pain and left with pure relief.

My visit to the "Gandhi Bhavan" is hopefully the first of many, the centre will continue to have my support from 6,926 km away. I will continue to support and visit them going forward knowing, and understanding the enormous task they have at ■



ಅಮರ ಮಧುರ ದನಿಯ ಒಡೆಯನಿಗೆ ವಿದಾಯ

– ಕೆ.ಪುಟ್ಟಸ್ವಾಮಿ

'ನಮಸ್ಕಾರ್ ಬೆಹನೋ.... ಬಾಯಿಯೋ; ಮೈ ಆಪ್ ಕಾ ದೋಸ್ತ್ ಅಮೀನ್ ಸಯಾನಿ ಬೋಲ್ ರಹಾ ಹೂನ್'– ರೇಡಿಯೋ ಟ್ಯೂನ್ ಮಾಡಿ ಕಾಯುತ್ತಿದ್ದ ಕೇಳುಗರಿಗೆ ಮೇಲಿನ ಮಾತುಗಳು ಅಲೆ ಅಲೆಯಾಗಿ ತೇಲಿಬಂದರೆ ಕಿವಿಗೆ ಜೇನು ಸುರಿದಂಥ ಅನುಭವ. ಅದರ ಹಿಂದೆಯೇ ಜನಪ್ರಿಯ ಹಿಂದೀ ಗೀತೆಗಳ ಪುಟ್ಟ ವಿವರದೊಡನೆ ಚಿತ್ರಗೀತೆ ಆರಂಭವಾದರೆ ತನ್ಮಯರಾಗಿ ಕೇಳುತ್ತಿದ್ದ ಶ್ರೋತೃಗಳು "ಅಗಲೇ ಸಪ್ತಾಹಿ ಫಿರ್ ಮಿಲೇಂಗೇ, ತಬ್ ತಕ್ ಕೇಲಿಯೇ ಅಪ್ನೆ ದೋಸ್ತ್ ಅಮೀನ್ ಸಹಾನೀಕೋ ಇಜಾಜತ್ ದೀಜಿಯೇ..ನಮಸ್ಕಾರ್, ...ಶುಭರಾತ್ರಿ...ಶಬ್ಬಾ ಖಯರ್" ಎಂಬ ಉಪಸಂಹಾರದ ಮಾತುಗಳವರೆಗೆ ಗಾನದ ರಸಗಂಗೆಯಲ್ಲಿ ಮಿಂದ ಅನುಭವದೊಡನೆ ಮೇಲೇಳುತ್ತಿದ್ದರು. ರೇಡಿಯೋ ಸಿಲೋನ್ನ 'ಬಿನಾಕಾ ಗೀತ್ಮಾಲಾ' ಕಾರ್ಯಕ್ರಮದಿಂದ ಆರಂಭವಾದ ಈ ನಿರೂಪಕ ಮತ್ತು ಕೇಳುಗರ ನಡುವಿನ ಅವಿನಾಭಾವ ಸಂಬಂಧ ಆರಂಭವಾಗಿ ಎಪ್ಪತ್ತೆರಡು ವರ್ಷ. ಕಾರ್ಯಕ್ರಮವೊಂದು ಪರಂಪರೆಯಾಗಿ ಬೆಳೆಯಲು ಪ್ರಮುಖ ಕಾರಣಕರ್ತರಾದ ಆ ಮಧುರ ದನಿಯ ಒಡೆಯನ ಬದುಕಿನ ಪ್ರಯಾಣ ಕಳೆದ ಮಂಗಳವಾರ ರಾತ್ರಿ ಕೊನೆಗೊಂಡಿತು. ಆದರೆ ಅವರು ಆರಂಭಿಸಿದ ಗಾಯನ ರಸಿಕತೆಯ ಪರಂಪರೆ ಮತ್ತು ಅವರ ಧ್ವನಿ ಅಮರವಾಗಿದೆ.


1932ರ ಡಿಸೆಂಬರ್ 23ರಂದು ಮುಂಬಯಿಯ ಬಹುಭಾಷಿಕ ಕುಟುಂಬದಲ್ಲಿ ಜನಿಸಿದ ಅಮೀನ್ ಸಯಾನಿ ಅವರದು ಭಾರತ ಸ್ವಾತಂತ್ರ ಸಂಗ್ರಾಮ ಕಾಲದ ಎಲ್ಲ ಆದರ್ಶಗಳನ್ನು ಮೈಗೂಡಿಸಿಕೊಂಡ ವ್ಯಕ್ತಿತ್ವ. ಗುಜರಾತಿ, ಹಿಂದೀ, ಮರಾಠೀ, ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಪರಿಚಿತವಿದ್ದ ಅವರ ಕುಟುಂಬವರ್ಗ ಗಾಂಧೀಜಿಯ ಆದರ್ಶಗಳನ್ನು ಮೈಗೂಡಿಸಿಕೊಂಡಿತ್ತು. ತಾಯಿ ಕುಲ್ಸುಮ್ ಸಯಾನಿ ಸ್ವಾತಂತ್ರ್ಯ ಹೋರಾಟಗಾರರು. ಮಹಾತ್ಮರ ಆದೇಶದಂತೆ ಅವರು ಹಿಂದೀ, ಗುಜರಾತಿ ಮತ್ತು ಉರ್ದುವಿನಲ್ಲಿ ನವಸಾಕ್ಷರಿಗಾಗಿ 'ರೆಹ್ಬಾರ್' ಎಂಬ ಪಾಕ್ಷಿಕವನ್ನು ಹೊರತರುತ್ತಿದ್ದರು. ಗಾಂಧಿಯವರ ಸಲಹೆಯಂತೆ ಸರಳವಾದ ಹಿಂದೂಸ್ತಾನಿ ಭಾಷೆಯಲ್ಲಿ ದೇಶದ ತರುಣರಿಗೆ ಮಾಹಿತಿ ಮತ್ತು ಮನರಂಜನೆಯನ್ನು ಕೇಂದ್ರವಾಗಿಟ್ಟುಕೊಂಡು ಹೊರಬರುತ್ತಿದ್ದ ಆ ಪತ್ರಿಕೆಗೆ ಎಳೆಯ ವಯಸ್ಸಿನಿಂದಲೇ ತಾಯಿಗೆ ನೆರವಾದ ಅಮೀನ್ ಸಂವಹನದ ಸೂಕ್ಷ್ಮಗಳನ್ನು ಅರಿತರು. ರೇಡಿಯೋ ನಿರೂಪಕರಾಗಿದ್ದ ಅಣ್ಣ ಹಮೀದ್ ಸಯಾನಿ ಅವರಿಂದ ಹದಿಮೂರು ವಯಸ್ಸಿನಲ್ಲೇ ತರಬೇತಿ ಪಡೆದ ಅಮೀನ್ ಇಂಗ್ಲಿಷ್ ಭಾಷೆಯಲ್ಲಿ ಮುಂಬೈ ಆಕಾಶವಾಣಿಯ ಮಕ್ಕಳ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ತೋರಿದ ಕುಶಲತೆ ಎಲ್ಲರ ಗಮನ ಸೆಳೆಯಿತು. ಅವರು ಆಕಾಶವಾಣಿಯ ಹಿಂದೀ ಮತ್ತು ಇಂಗಿಷ್ ಕಾರ್ಯಕ್ರಮ ನಿರೂಪಕರಾಗಿ ಬೆಳೆಯಲು ಬಹುಕಾಲ ಬೇಕಾಗಲಿಲ್ಲ.

ಅಮೀನ್ ಸಯಾನಿ ಅವರು ಮನರಂಜನಾ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಲು ಕಾರಣಕರ್ತರಾದವರು ಭಾರತ ಗಣರಾಜ್ಯವಾದ ನಂತರದಲ್ಲಿ ರಚನೆಯಾದ ನೆಹರೂ ಸಂಪುಟದಲ್ಲಿ ವಾರ್ತಾ ಮತ್ತು ಪ್ರಸಾರ ಖಾತೆಯ ಮಂತ್ರಿಯಾಗಿದ್ದ ಬಾಲಕೃಷ್ಣ ವಿಶ್ವನಾಥ ಕೇಸ್ಕರ್ ಅವರು. ಒಂದೆಡೆ ಆಧುನಿಕತೆಯನ್ನು ಮೈಗೂಡಿಸಿಕೊಂಡು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಭಾರತವನ್ನು ಕಟ್ಟಲು ನೆಹರೂ ಹೆಣಗಿದರೆ ಸಂಪ್ರದಾಯಸ್ಥ ಕೇಸ್ಕರ್ ಪರಿಶುದ್ಧ ಸಂಸ್ಕೃತಿಯ ಭಾರತವನ್ನು ಕಟ್ಟಲು ಬಯಸಿದ್ದರು. ಇಸ್ಲಾಂ ಮತ್ತು ಪಾಶ್ಚಿಮಾತ್ಯರ ಪ್ರಭಾವದಿಂದ 'ಹೊಲಸೆದ್ದು' ಹೋಗಿರುವ ಭಾರತೀಯ ಸಂಗೀತ, ಮುಖ್ಯವಾಗಿ, ಹಿಂದೀ ಸಿನೆಮಾ ಗೀತೆಗಳು ಸಮಾಜದ ಅಭಿರುಚಿ ಕೆಡಿಸಿದೆಯೆಂದು ಅವರು ಗಾಢವಾಗಿ ನಂಬಿದ್ದರು. ಸಿನೆಮಾ ಪ್ರಭಾವವನ್ನು ಅರಿತ ನೆಹರೂ ಅವರು ಚಿತ್ರೋದ್ಯಮವು ಸೃಜನಶೀಲವಾಗಿ ಮುನ್ನಡೆಯಲು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ, ರಾಷ್ಟ್ರೀಯ ಚಲನಚಿತ್ರ ಪುರಸ್ಕಾರ ಯೋಜನೆಗಳನ್ನು ಜಾರಿಗೆ ತಂದ ಕಾಲದಲ್ಲಿಯೇ ಕೇಸ್ಕರ್ ಅವರು ತಮ್ಮ ದೃಷ್ಟಿಯಲ್ಲಿ ಅಗ್ಗದ ಮನರಂಜನೆ ಎನಿಸಿದ ಚಲನಚಿತ್ರಗೀತೆಗಳು, ಕ್ರಿಕೆಟ್ ಕಾಮೆಂಟರಿ ಮುಂತಾದ ಕಾರ್ಯಕ್ರಮಗಳ ಪ್ರಸಾರಕ್ಕೆ ಸಂಪೂರ್ಣ ನಿಷೇಧ ಹೇರಿದರು. ಆಕಾಶವಾಣಿ ಕೇವಲ ಸುದ್ದಿ, ಮಾಹಿತಿ ಪ್ರಸಾರದ ಮಾಧ್ಯಮ ಮಾತ್ರವಲ್ಲದೆ ಚಿತ್ರಗೀತೆ, ಜನಪದ ಗೀತೆ, ವೀಕ್ಷಕ ವಿವರಣೆ ಮುಂತಾದ ಕಾರ್ಯಕ್ರಮಗಳ ಮನರಂಜನೆಯ ಮಾಧ್ಯವಾಗಿ ಜನಪ್ರಿಯವಾಗಿ ದೇಶದ ಮೂಲೆ ಮೂಲೆಯನ್ನು ತಲುಪಿತ್ತು. ಕೇಸ್ಕರ್ ಅವರ ನಿರ್ಧಾರದಿಂದ ಚಿತ್ರಗೀತೆಗಳ ಪ್ರಸಾರದ ಮೂಲಕ ಚಿತ್ರಗಳಿಗೆ ಪ್ರಚಾರ ಪಡೆಯುತ್ತಿದ್ದ ನಿರ್ಮಾಪಕರು ಹೌಹಾರಿದರು. ಚಿತ್ರಗಳ ಪ್ರಚಾರಕ್ಕೆ ಹೊಡೆತಬಿತ್ತು. ಚಿತ್ರಗೀತೆಗಳಿಗೆ ಒಲಿದಿದ್ದ ಜನತೆಗೆ ನಿರಾಶೆಯಾಯಿತು.

ಅಮೀರ್ ಸಯಾನಿ ಅವರ ಮಾತಿಗೆ ಮೋಡಿಹಾಕುವ ಸಾಮರ್ಥ್ಯವಿತ್ತು. ತಮ್ಮ ಸಂಮೋಹಕ ಭಾಷೆಯಲ್ಲಿ ದಾಖಲೆ

ಎನಿಸಿರುವ 54,000 ಕಾರ್ಯಕ್ರಮಗಳನ್ನು ಅವರು ನಡೆಸಿಕೊಟ್ಟಿದ್ದಾರೆ. ಸುಮಾರು 19,000 ರೇಡಿಯೋ ಜಾಹೀರಾತು ಜಿಂಗಲ್ಗಳಿಗೆ ಕಂಠದಾನ ಮಾಡಿದ್ದಾರೆ. ಅನೇಕ ಹಿಂದೀ ಚಿತ್ರಗಳಲ್ಲಿ ಉದ್ಘೋಷಕರಾಗಿ ಕಾಣಿಸಿಕೊಂಡಿದ್ದಾರೆ. ಅವರು ಆಕಾಶವಾಣಿಗೆ ನಡೆಸಿಕೊಟ್ಟ ಚಿತ್ರ ರಂಗದ ಪ್ರಸಿದ್ಧ ಕಲಾವಿದರು ಮತ್ತು ತಂತ್ರಜ್ಞರ ಸಂದರ್ಶನಗಳು ಸಹ ಅಪಾರ ಜನಪ್ರಿಯತೆ ಪಡೆದಂಥವು. ಸೆಲೆಬ್ರಿಟಿಗಳಿಗೆ ಅವರ ಬದುಕಿಗೆ ಸಂಬಂಧಿಸಿದ ವಿಚಾರ– ವಿವಾದಗಳನ್ನು ಕುರಿತು ಪ್ರಶ್ನಿಸುವಾಗ ಮನುಷ್ಯ ಘನತೆಗೆ ಕುಂದುಂಟಾಗದ ರೀತಿಯಲ್ಲಿ, ಎದುರು ಕೂತವರಿಗೆ ಮುಜುಗುರವಾಗದ ಭಾಷೆಯನ್ನು ಬಳಸಿ ಅವರಿಂದ ಉತ್ತರ ಪಡೆಯುತ್ತಿದ್ದ ರೀತಿ ಇಂದಿಗೂ ಅಧ್ಯಯನ ಯೋಗ್ಯ. ಪ್ರಸಿದ್ಧಿಯ ತುತ್ತ ತುದಿಯಲ್ಲಿದ್ದ ಗಾಯಕಿ ಲತಾ ಮಂಗೇಷ್ಕರ್ ಅವರಿಗೆ ಗಾಯಕ ಮಹಮದ್ ರಫಿ ಜೊತೆಗಿನ ಜಗಳ, ಸಂಗೀತ ನಿರ್ದೇಶಕ ಓ ಪಿ ನಯ್ಯರ್ ಅವರೊಂದಿಗಿನ ಮುನಿಸು, ಸೋದರಿ ಆಶಾ ಭೋಂಸ್ಲೆಯ ಜೊತೆಗಿನ ಸ್ಪರ್ಧೆ, ಮದುವೆಯಾಗದೇ ಉಳಿಯಲು ಮಾಡಿದ ನಿರ್ಧಾರಕ್ಕೆ ಸಂಬಂಧಿಸಿದ ಸೂಕ್ಷ್ಮ ಪ್ರಶ್ನೆಗಳನ್ನು ಹಾಕಿಯೂ ಮುಜುಗರಗೊಳಿಸದೆ ಅವರಿಂದ ಉತ್ತರ ಪಡೆದ ಸಯಾನಿ ಸೆಲೆಬ್ರಿಟಿಗಳ ಸಂದರ್ಶನದ ಉತ್ತಮ ಮಾದರಿಯೊಂದನ್ನು ಹಾಕಿಕೊಟ್ಟರು.

ಸಯಾನಿ ಅವರ ನಿಧನವು ಐವತ್ತು ಅರವತ್ತರ ದಶಕದ ಹಿಂದೀ ಚಿತ್ರಗೀತೆಗಳ ಸುವರ್ಣ ಯುಗ ಹಾಗು ನೌಷಾದ್, ಮದನ್ ಮೋಹನ್, ಓ ಪಿ ನಯ್ಯರ್, ಖಯ್ಯಾಂ, ಸಿ ರಾಮಚಂದ್ರ, ಅನಿಲ್ ಬಿಸ್ವಾಸ್, ಹೇಮಂತ್ ಕುಮಾರ್, ಶಂಕರ್ ಜೈ ಕಿಷನ್, ಎಸ್ ಡಿ ಬರ್ಮನ್ ಮುಂತಾದ ಸಂಗೀತ ದಿಗ್ಗಜರು ಸಂಯೋಜಿಸಿದ ರಾಗಗಳನ್ನು, ಮಹಮದ್ ರಫಿ, ಲತಾ ಮಂಗೇಷ್ಕರ್, ಆಶಾ, ಹೇಮಂತ್ ಕುಮಾರ್, ಮನ್ನಾ ಡೇ, ಮುಖೇಶ್, ಕಿಶೋರ್ ಅವರಂಥ ಗಂಧರ್ವರು ಸುರಿಸಿದ ಗಾನಸುಧೆಯನ್ನು ದೇಶದ ಮೂಲೆ ಮೂಲೆಗೆ ತಲುಪಿಸಿ ಮನರಂಜನಾ ಕ್ಷೇತ್ರದಲ್ಲಿ ಪಾರಮ್ಯ ಸಾಧಿಸಿದ್ದ ಆಕಾಶವಾಣಿಯ ಅಭೂತಪೂರ್ವ ಯುಗದ ಅಂತ್ಯದಂತೆ ಕಾಣುತ್ತದೆ. ಆ ಸೃಜನಶೀಲ ಮನಸ್ಸುಗಳು ಸೃಷ್ಟಿಸಿದ ಸಂಗೀತ, ಸಾಹಿತ್ಯ ಮತ್ತು ಗಾಯನವನ್ನು ಪ್ರತಿ ಮನೆಯಲ್ಲಿ, ಕೇಳುಗರ ಹೃದಯದಲ್ಲಿ ಅನುರಣಿಸುವಂತೆ ದಾಟಿಸುವಲ್ಲಿ ಸಯಾನಿ ಅವರ ಕಾಣಿಕೆ ಮಹತ್ವದ್ದು. ಅದರ ಜೊತೆಗೆ ನಿರೂಪಣೆಯ ಭಾಷೆಯ ಸೌಂದರ್ಯವನ್ನು ವೃದ್ಧಿಸಿದ, ರುಚಿಶುದ್ಧವಾದ ಕೇಳುವ ಸಂಸ್ಕೃತಿಯನ್ನು ರೂಪಿಸಿದ ಅಮೀನ್ ಸಯಾನಿ ದೇಶದ ರಸಿಕರನ್ನು ಒಗ್ಗೂಡಿಸಿದ ಮಹಾನ್ ಕಲಾವಿದ.



ಮಕ್ಕಳಿಗಾಗಿ ಗಾಂಧಿ ಕತೆ

ಸಂಗ್ರಹ : ಸುಧಾ ಅಡುಕುಳ

ಗಾಂಧೀಜಿಯವರನ್ನು ಪ್ರಭಾವಿಸಿದ ಪುಸ್ತಕ

ಗಾಂಧೀಜಿಯವರನ್ನು ಪ್ರಭಾವಿಸಿದ ನಾಟಕಗಳ ಬಗ್ಗೆ ನಿಮಗೆ ಗೊತ್ತು. ಶ್ರವಣಕುಮಾರ ಹಾಗೂ ಸತ್ಯ ಹರಿಶ್ಚಂದ್ರ ನಾಟಕಗಳಿಂದ ಗಾಂಧೀಜಿ ಬಹಳ ಪ್ರಭಾವಿತರಾಗಿದ್ದರು. ಹಾಗೆಯೇ ಅವರು ಪುಸ್ತಕಗಳಿಂದಲೂ ಪ್ರಭಾವಿತರಾಗಿದ್ದರು.

ಚಿಕ್ಕಂದಿನಿಂದಲೂ ಗಾಂಧೀಜಿ ಪಠ್ಯಪುಸ್ತಕಗಳನ್ನು ಬಿಟ್ಟರೆ ಬೇರೆ ಪುಸ್ತಕಗಳನ್ನು ಓದಿದ್ದು ಕಡಿಮೆಯೆ. ಆದರೆ ಓದಿದ ಕೆಲವೇ ಪುಸ್ತಕಗಳನ್ನು ಅವರು ಕೂಲಂಕುಶವಾಗಿ ಅರ್ಥಮಾಡಿಕೊಳ್ಳುತ್ತಿದ್ದರು. ರಾಮಾಯಣ, ಭಗವದ್ಗೀತೆಗಳಲ್ಲದೇ ಕುರಾನ್, ಬೈಬಲ್ ಮೊದಲಾದ ಅನೇಕ ಧರ್ಮಗಳ ಗ್ರಂಥಗಳನ್ನು ಅವರು ಅಭ್ಯಾಸ ಮಾಡಿದ್ದರು.

ದಕ್ಷಿಣ ಆಫ್ರಿಕಾದಲ್ಲಿರುವಾಗ ಒಮ್ಮೆ ಅವರು ಜೋಹಾನ್ಸ್‌ಬರ್ಗ್‌ನಿಂದ ಡರ್ಬಾನ್‌ಗೆ ಹೋಗಬೇಕಿತ್ತು. ಅವರನ್ನು ಕಳುಹಿಸಲು ಸ್ಟೇಶನ್‌ಗೆ ಬಂದ ಅವರ ಸ್ನೇಹಿತರಾದ ಪೋಲಕ್ ಅವರಿಗೆ ಮಾರ್ಗದಲ್ಲಿ ಓದಲೆಂದು ರಸ್ಕಿನ್ ಬರೆದ ಅನ್ ಟು ದ ಲಾಸ್ಟ್ ಎಂಬ ಪುಸ್ತಕವನ್ನು ನೀಡಿದರು. ಇಪ್ಪತ್ನಾಲ್ಕು ಗಂಟೆಯ ಪ್ರಯಾಣದಲ್ಲಿ ಗಾಂಧೀಜಿ ಪುಸ್ತಕವನ್ನು ಇಡಿಯಾಗಿ ಓದಿದರು.

ಆ ಪುಸ್ತಕ ಅವರ ಮೇಲೆ ಅದೆಷ್ಟು ಪ್ರಭಾವ ಬೀರಿತೆಂದರೆ, ಅದನ್ನವರು ಮುಂದೆ ಸರ್ವೋದಯ ಎಂಬ ಹೆಸರಿನಲ್ಲಿ ಗುಜರಾತ್ ಭಾಷೆಗೆ ಅನುವಾದಿಸಿದರು.

ಮನುಷ್ಯನ ಹೃದಯದಲ್ಲಿರುವ ಸದ್ಭಾವನೆಗಳನ್ನು ಜಾಗೃತಗೊಳಿಸುವವನೆ ನಿಜವಾದ ಕವಿ ಎಂಬುದು ಅವರ ನಂಬಿಕೆಯಾಗಿತ್ತು. ಈ ಗ್ರಂಥವು ಅವರೊಳಗಿರುವ ಸಮಾಜ ಸುಧಾರಕನನ್ನು ಬಡಿದೆಬ್ಬಿಸಿತ್ತು. ಈ ಪುಸ್ತಕವನ್ನು ಓದಿ ಮುಗಿಸುವಾಗ ಬೆಳಗಾಗಿತ್ತು. ಅವರ ಮನಸ್ಸಿನೊಳಗೂ ಅರಿವಿನ ಸೂರ್ಯ ಉದಯಿಸಿದ್ದ. ಪುಸ್ತಕದಲ್ಲಿರುವ ಎಲ್ಲ ಆಶಯವನ್ನೂ ಆಚರಣೆಗೆ ತರಬೇಕೆಂದು ಗಾಂಧೀಜಿ ಅಂದೇ ನಿರ್ಧಾರ ಮಾಡಿದರು. ಪುಸ್ತಕದಲ್ಲಿರುವ ತತ್ವವನ್ನು ಅವರು ಅಂದೇ ಟಿಪ್ಪಣಿ ಮಾಡಿಕೊಂಡರು.

- ಎಲ್ಲರ ಒಳಿತಿನಲ್ಲಿ ನಮ್ಮ ಒಳಿತಿದೆ.
- ವಕೀಲನ ಕೆಲಸಕ್ಕಿರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ಯಾಕೆಂದರೆ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನ ಹಕ್ಕು ಇದೆ.
- ಶ್ರಮಜೀವಿಯ ಜೀವನ ಅಂದರೆ ಉಳುವವನ ಅಥವಾ ಕೈಕಸುಬುದಾರನ ಜೀವನವೇ ಯೋಗ್ಯ ಜೀವನ.

ಇವುಗಳಲ್ಲಿ ಮೊದಲನೆಯದು ಅವರಿಗೆ ತಿಳಿದಿತ್ತು. ಎರಡನೆಯದರ ಪರಿಚಯವೂ ಇತ್ತು. ಮೂರನೆಯದು ಮಾತ್ರ ಸಂಪೂರ್ಣ ಹೊಸದಾಗಿತ್ತು. ಗಾಂಧೀಜಿಯವರ ಖಾದಿಧಾರಣೆ, ಚರಕಾ ಆಂದೋಲನ ಮತ್ತು ಆಶ್ರಮ ಜೀವನಗಳಲೆಲ್ಲಾ ಈ ತತ್ವಗಳ ಸಂಪೂರ್ಣ ಅನುಷ್ಠಾನವನ್ನು ನಾವು ನೋಡಬಹುದಾಗಿದೆ. ಉತ್ತಮ ಪುಸ್ತಕಗಳು ಬದುಕಿಗೆ ಕೈಗನ್ನಡಿಗಳಾಗಬಲ್ಲವು. ■

ಚಿ|ತ್ರಾ|ವ|ಳಿ






ಜಿಲ್ಲೆಗೊಂದು ಗಾಂಧಿ ಭವನ ' ನಿರ್ಮಾಣ ಕಾರ್ಯಕ್ರಮದ ಅಡಿಯಲ್ಲಿ ಹಾವೇರಿಯಲ್ಲಿ ನಿರ್ಮಿಸಿರುವ ಗಾಂಧಿ ಭವನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಇತ್ತೀಚಿಗೆ ಲೋಕಾರ್ಪಣೆ ಮಾಡಿದರು .



ಅರಸಿಕೆರೆಯ ಕಸ್ತೂರ್ ಬಾ ಆಶ್ರಮದಲ್ಲಿ ಮಾತೃದಿವಸದ ಅಂಗವಾಗಿ ಶ್ರಮದಾನ ಮಾಡಿದ ಆಶ್ರಮದ ವಿದ್ಯಾರ್ಥಿಗಳು ..



ಮೂಡಿಗೆರೆ ಸಮೀಪದ ಭಾರತಿ ಬೈಲ್ ನಲ್ಲಿ ಆಶ್ರಮದ ಪುಟಾಣಿ ಮಕ್ಕಳು ಕಸ್ತೂರ್ ಬಾ ಮತ್ತು ಗಾಂಧಿ ಪ್ರತಿಮೆ ಮುಂದೆ ಮಾತೃ ನಮನ ಸಲ್ಲಿಸಿದರು .



ಕುವೆಂಪು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ . ಚಿದಾನಂದಗೌಡ ಮತ್ತು ಹೆಸರಾಂತ ಕಲಾ ನಿರ್ದೇಶಕ ಶಶಿಧರ ಅಡಪ ಅವರು ಗಾಂಧಿ ಭವನಕ್ಕೆ ಇತ್ತೀಚಿಗೆ ಭೇಟಿ ನೀಡಿದ್ದರು. ಅವರು ಗಾಂಧಿ ಭವನದಲ್ಲಿ ನಡೆಯುತ್ತಿರುವ ಗಾಂಧಿ ಸಾಹಿತ್ಯ ಡಿಜಟಲೀಕರಣ ಕೇಂದ್ರ ವೀಕ್ಷಿಸಿದರು .ಗಾಂಧಿಭವನದಲ್ಲಿ ರೂಪಿಸಲು ಉದ್ದೇಶಿಸಿರುವ ' ಮಕ್ಕಳ ಗಾಂಧಿ ಅಂಗಳ ' ದ ಪರಿಕಲ್ಪನೆ ಬಗ್ಗೆ ಶಶಿಧರ ಅಡಪ ಅವರ ಜೊತೆ ಚರ್ಚಿಸಲಾಯಿತು



ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿ ಡಾ .ಡಿ ವಿ ಪರಶಿವ ಮೂರ್ತಿ ಮತ್ತು ವಿಜ್ಞಾನ ಇತಿಹಾಸ ವಿಭಾಗದ ನಿರ್ದೇಶಕಿ ಡಾ . ಶೈಲಜಾ ಹಿರೇಮಠ್ ಅವರು ಗಾಂಧಿ ಭವನದ ಸ್ಕ್ಯಾನಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಕನ್ನಡ ವಿಶ್ವವಿದ್ಯಾಲಯದ ಅಮೂಲ್ಯ ಗ್ರಂಥಗಳ ಡಿಜಟಲೀಕರಣ ಒಪ್ಪಂದ ಕುರಿತು ಸರ್ವೆಂಟ್ಸ್ ಆಫ್ ನಾಲೆಡ್ಜ್ ನ ಓಂ ಶಿವಪ್ರಕಾಶ್ ಅವರಿಂದ ವಿವರಣೆ ಪಡೆದುಕೊಂಡರು .



ಎಚ್ ಸಿ ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ನೂತನ ಕಟ್ಟಡಕ್ಕೆ ಮೈಸೂರಿನಲ್ಲಿ ಶಂಕು ಸ್ಥಾಪನೆ ಸಮಾರಂಭ ನಡೆಯಿತು. ಸುತ್ತೂರು ಶ್ರೀಗಳು , ಚುಂಚಶ್ರೀಗಳು ಹಾಗೂ ಎಚ್ ಸಿ ದಾಸಪ್ಪ ವಿಚಾರ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು .




ಫ ಗು ಹಳಕಟ್ಟಿ ಸಂಶೋಧನಾ ಕೇಂದ್ರದ ವಿದ್ವಾಂಸರಾದ ಪ್ರೊ . ಕೃಷ್ಣ ಕೊಲ್ಲಾರ್ ಕುಲಕರ್ಣಿ ಅವರು ಗಾಂಧಿ ಭವನದ ಡಿಜಿಟಲ್ ಸ್ಕ್ಯಾನಿಂಗ್ ಕೇಂದ್ರಕ್ಕೆ ಭೇಟಿ ನೀಡಿದ್ದರು .



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001

Printed at : **Printastic,** 272, 2nd Main Road, 6th Cross, Lavakushanagar, Laggere Bangalore-58